ಸಂಪುಟ : 11 ಸಂಚಿಕೆ: 84 ಪುಟ : 4+2 ಬೆಲೆ: 3.00 ಶನಿವಾರ ಮೇ 02 2026 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYASAKSHI KANNADA DAILY ಕನ್ನಡ ದಿನಪತ್ರಿಕೆ

Volume : 11 Issue : 84 Pages : 4+2 Price : 3.00 Saturday May 2 2026 Gadag RNI No: KARKAN/2015/63412 E-mail: vijayasakshidaily@gmail.com Post Regn.No: GDG/72/2023-25




**ಭಗವಾನ್ ಬುದ್ಧ ಜಯಂತಿ ಆಚರಣೆಯಲ್ಲಿ ಸಚಿವ ಪಾಟೀಲ; ರೂ10 ಕೋಟಿ ವೆಚ್ಚದಲ್ಲಿ ಭವ್ಯ ಬುದ್ಧ ವಿಹಾರ ನಿರ್ಮಾಣ ಘೋಷಣೆ**

# ಬುದ್ಧನ ಶಾಂತಿ ಮಂತ್ರ ಇಂದಿನ ಜಗತ್ತಿಗೆ ಅನಿವಾರ್ಯ

■ ವಿಜಯಸಾಕ್ಷಿ ಸುದ್ದಿ, ಗದಗ

ಜಗತ್ತಿನಾದ್ಯಂತ ಯುದ್ಧದ ಕಾರ್ಮೋಡಗಳು ಕವಿದಿರುವ ಇಂದಿನ ವಿಷಮ ಪರಿಸ್ಥಿತಿಯಲ್ಲಿ ಭಗವಾನ್ ಬುದ್ಧನ ಶಾಂತಿ, ಅಹಿಂಸೆ ಹಾಗೂ ಸಹಬಾಳ್ವೆಯ ಸಂದೇಶಗಳು ಹಿಂದೆಂದಿಗಿಂತಲೂ ಹೆಚ್ಚು ಪ್ರಸ್ತುತವಾಗಿದ್ದು, ಬುದ್ಧನ ಶಾಂತಿ ಮಂತ್ರ ಇಂದಿನ ಜಗತ್ತಿಗೆ ಅತ್ಯಂತ ಅನಿವಾರ್ಯವಾಗಿದೆ ಎಂದು ರಾಜ್ಯದ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ ಹೇಳಿದರು.

ನಗರದ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ ಜಿಲ್ಲಾಡಳಿತ ಭವನದ ಅಡಿಟೋರಿಯಂ ಸಭಾಂಗಣದಲ್ಲಿ ಆಯೋಜಿಸಲಾದ ಭಗವಾನ್ ಬುದ್ಧ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಬುದ್ಧನ ತತ್ವಗಳು ಒಂದು ಧರ್ಮ ಅಥವಾ ಪ್ರದೇಶಕ್ಕೆ ಸೀಮಿತವಾಗದೇ ಇಡೀ ಜಗತ್ತಿನ ಆಸ್ತಿಯಾಗಿವೆ ಎಂದು ಹೇಳಿದರು.

ಜಾಗತಿಕ ರಾಜಕೀಯ ಪರಿಸ್ಥಿತಿಯನ್ನು ಉಲ್ಲೇಖಿಸಿದ ಅವರು, ರಷ್ಯಾ-ಉಕ್ರೇನ್ ಹಾಗೂ ಇಸ್ರೇಲ್-ಇರಾನ್ ನಡುವಿನ ಯುದ್ಧಗಳಿಂದ ಜಗತ್ತು ಭಾರೀ ಬೆಲೆ ತರುತ್ತಿದೆ. ಯುದ್ಧದ ಪರಿಣಾಮ ಅಮೆರಿಕದಂತಹ ರಾಷ್ಟ್ರವೂ ಸುಮಾರು 40 ಲಕ್ಷ ಕೋಟಿ ಡಾಲರ್‌ಗಳಷ್ಟು ಆರ್ಥಿಕ ನಷ್ಟ ಅನುಭವಿಸಿದೆ ಎಂದರು. ಸಾವು-ನೋವು ಮತ್ತು ವಿನಾಶದ ಹಾದಿ ಮನುಕುಲಕ್ಕೆ ಮಾರಕವಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು.




ಬುದ್ಧ ಎಂದರೆ ಕೇವಲ ಕಣ್ಣು ಮುಚ್ಚಿ ಕುಳಿತ ಶಾಂತಿ ಮೂರ್ತಿ ಅಲ್ಲ, ಆತ ಸಮಾನತೆ ಮತ್ತು ಏಕಾಗ್ರತೆಯ ಮಹಾಗುರು. ಗಂಡು-ಹೆಣ್ಣು, ಶ್ರೀಮಂತ-ಬಡವ ಎಂಬ ಭೇದವಿಲ್ಲದ ಸಮಸಮಾಜದ ಕನಸನ್ನು ಬುದ್ಧ ಅಂದೇ ಕಂಡಿದ್ದರು. ಇಂದಿನ ರಾಜಕೀಯದಲ್ಲಿ ದ್ವೇಷ ಮತ್ತು ಹಿಂಸೆಯ ಪ್ರವೃತ್ತಿ ಹೆಚ್ಚುತ್ತಿರುವ ಸಂದರ್ಭದಲ್ಲಿ ಭಾರತವು ಬುದ್ಧನ ಶಾಂತಿ ಮಂತ್ರದ ಆಧಾರದಲ್ಲಿ ಒಗ್ಗಟ್ಟಿನಿಂದ ಸಾಗುತ್ತಿದೆ ಎಂದು ಹೇಳಿದರು.

ಗದಗ ನಗರದಲ್ಲಿ ಬೌದ್ಧ ಸಂಸ್ಕೃತಿ ಮತ್ತು ವಿಚಾರಧಾರೆಗಳನ್ನು ಪಸರಿಸುವ ನಿಟ್ಟಿನಲ್ಲಿ ರೂ.10 ಕೋಟಿ ವೆಚ್ಚದಲ್ಲಿ ಭವ್ಯ ಬುದ್ಧ ವಿಹಾರ ನಿರ್ಮಾಣಕ್ಕೆ ಸರ್ಕಾರ ಅನುಮೋದನೆ ನೀಡಿದ್ದು, ಈಗಾಗಲೇ ರೂ.3 ಕೋಟಿ ಅನುದಾನ ಬಿಡುಗಡೆಯಾಗಿದೆ. ನಗರದ ಮೆಡಿಕಲ್ ಕಾಲೇಜು ಸಮೀಪದ ಗುಡ್ಡದ ಮೇಲಿನ ಜಾಗದಲ್ಲಿ ಈ ವಿಹಾರ ನಿರ್ಮಾಣವಾಗಲಿದ್ದು, ಮುಂದಿನ ಒಂದು ತಿಂಗಳೊಳಗಾಗಿ ಕಾಮಗಾರಿ ಆರಂಭವಾಗಲಿದೆ ಎಂದು ತಿಳಿಸಿದರು.

> "ಟ್ರಂಪ್ ಅವರೇ, ಇಂದು ಜಗತ್ತಿಗೆ ನಿಮ್ಮ ಬಂದೂಕು ಬೇಕಾಗಿಲ್ಲ, ಬುದ್ಧನ ಶಾಂತಿ ಮಂತ್ರ ಬೇಕಾಗಿದೆ" ಎಂದು ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಉದಾಹರಣೆಯೊಂದಿಗೆ ಸಚಿವರು ಮಾರ್ಮಿಕವಾಗಿ ಹೇಳಿದರು. ಬುದ್ಧನ ತತ್ವಗಳು ಜಗತ್ತಿನಾದ್ಯಂತ ಸಕಾರಾತ್ಮಕ ಮತ್ತು ರಚನಾತ್ಮಕ ಬದಲಾವಣೆಗೆ ದಾರಿದೀಪವಾಗಿವೆ ಎಂದು ಸಚಿವ ಎಚ್.ಕೆ. ಪಾಟೀಲ ಹೇಳಿದರು.

ನಮ್ಮ ದೇಶದ ಸಂವಿಧಾನವು ಬುದ್ಧನ 'ಬುದ್ಧಂ ಧಮ್ಮಂ' ಸಾರವನ್ನು ಒಳಗೊಂಡಿದ್ದು, ಬಾಬಾಸಾಹೇಬ್ ಅಂಬೇಡ್ಕರ್ ಅವರು ಬುದ್ಧನ ಸಮಾನತೆಯ ತತ್ವಗಳಿಂದ ಪ್ರೇರಿತರಾಗಿ ಸಂವಿಧಾನ ರೂಪಿಸಿದ್ದಾರೆ. ಬಸವಣ್ಣ ಹಾಗೂ ಮಹಾತ್ಮ ಗಾಂಧೀಜಿಯವರ ವಿಚಾರಧಾರೆಗಳೂ ಅದರಲ್ಲಿ ಸಮ್ಮಿಳಿತವಾಗಿವೆ ಎಂದು ವಿವರಿಸಿದರು.

ವಿದ್ಯಾರ್ಥಿಗಳು ಬುದ್ಧನ ಸಾಹಿತ್ಯವನ್ನು ಓದಿ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ವಿಧಾನ ಪರಿಷತ್ ಸದಸ್ಯ ಎಸ್.ವಿ. ಸಂಕನೂರು ಮಾತನಾಡಿ, ಜಗತ್ತಿನಲ್ಲಿ ಶಾಂತಿ, ಅಹಿಂಸೆ ಮತ್ತು ಮಾನವೀಯತೆ ನೆಲೆಸಲು ಬುದ್ಧನ ತತ್ವಗಳು ಅತ್ಯವಶ್ಯಕವಾಗಿದ್ದು, ಅವುಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು. ಬುದ್ಧನು ಶಾಂತಿ, ಅಹಿಂಸೆ ಮತ್ತು ಮಾನವೀಯತೆ ಎಂಬ ಮೂರು ಮಹಾನ್ ಮಂತ್ರಗಳನ್ನು ಜಗತ್ತಿಗೆ ನೀಡಿದ್ದಾನೆ ಎಂದು ಹೇಳಿದರು.

ನಿವೃತ್ತ ಉಪನ್ಯಾಸಕ ಸತೀಶ ಪಾಶಿ ಮಾತನಾಡಿ, ಬುದ್ಧನು ಕೇವಲ ವ್ಯಕ್ತಿಯಲ್ಲ, ಆತ ಇಡೀ ಜಗತ್ತನ್ನೇ ಶಾಂತಿ ಮತ್ತು ಸತ್ಯದ ಮೂಲಕ ಗೆದ್ದ ಮಹಾನ್ ಚಿಂತಕ ಎಂದು ಹೇಳಿದರು. ಸಿದ್ಧಾರ್ಥನು ಅರಮನೆಯ ಐಶ್ವರ್ಯವನ್ನು ತೊರೆದು ಸತ್ಯದ ಹುಡುಕಾಟಕ್ಕಾಗಿ ಹೊರಟ ಘಟನೆಯನ್ನು ವಿವರಿಸಿದರು.

ಕಾರ್ಯಕ್ರಮದಲ್ಲಿ ಜೇನುಗೂಡು ಕಲಾತಂಡದ ಬಸವರಾಜ ಅಂಗಡಿ ಮತ್ತು ಸಂಗಡಿಗರು ಭಗವಾನ್ ಬುದ್ಧರ ಗಾಯನ ಹಾಗೂ ನಾಡಗೀತೆಗಳನ್ನು ಪ್ರಸ್ತುತಪಡಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ. ಬಸವರಾಜ ಬಳ್ಳಾರಿ ಸ್ವಾಗತಿಸಿದರು. ಪ್ರೊ. ಬಾಹುಬಲಿ ಜೈನರ ಕಾರ್ಯಕ್ರಮ ನಿರೂಪಿಸಿದರು.

> "ಜಗತ್ತಿಗೆ ಬಂದೂಕು ಬೇಕಾಗಿಲ್ಲ, ಬುದ್ಧನ ಶಾಂತಿ ಮಂತ್ರವೇ ಅಗತ್ಯ."
> **– ಸಚಿವ ಎಚ್.ಕೆ. ಪಾಟೀಲ**

ಕಾರ್ಯಕ್ರಮಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ ಹಾಗೂ ಡಾ. ಎಸ್.ವಿ. ಸಂಕನೂರು ಜ್ಯೋತಿ ಬೆಳಗಿಸುವ ಮೂಲಕ ಚಾಲನೆ ನೀಡಿದರು. ಇದೇ ಸಂದರ್ಭದಲ್ಲಿ ಬಿ.ಇ.ಡಿ ಕಾಲೇಜುಗಳಲ್ಲಿ ನಡೆದ ಪ್ರಬಂಧ ಸ್ಪರ್ಧೆ ವಿಜೇತರು, ಎಸ್ಎಸ್ಎಲ್‌ಸಿ ಹಾಗೂ ಪಿಯುಸಿಯಲ್ಲಿ ಹೆಚ್ಚಿನ ಅಂಕ ಪಡೆದ ವಿದ್ಯಾರ್ಥಿಗಳು ಮತ್ತು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರಿಗೆ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷ ಡಿ.ಆರ್. ಪಾಟೀಲ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಕ್ಬರಸಾಬ್ ಬಬರ್ಚಿ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಬಿ.ಬಿ. ಅಸೂಟಿ, ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಅಶೋಕ ಮಂದಾಲಿ, ಅಪರ ಜಿಲ್ಲಾಧಿಕಾರಿ ಡಾ. ದುರಗೇಶ ಕೆ.ಆರ್., ಉಪವಿಭಾಗಾಧಿಕಾರಿ ಗಂಗಪ್ಪ ಎಂ., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರೋಹನ್ ಜಗದೀಶ, ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಸಿ.ಆರ್. ಮುಂಡರಗಿ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕಿ ಡಾ. ನಂದಾ ಹಣಬರಟ್ಟಿ, ಸಫಾಯಿ ಕರ್ಮಚಾರಿ ಸಂಘದ ಸದಸ್ಯ ಎಸ್.ಎನ್. ಬಳ್ಳಾರಿ ಸೇರಿದಂತೆ ಸಮಾಜದ ಗಣ್ಯರು, ಮುಖಂಡರು, ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

---

## ಬಸವಾದಿ ಶಿವಶರಣರ ಬೃಹತ್ ಹಿಂದೂ ಸಮಾವೇಶದ ಸಿದ್ಧತೆ ಹಿನ್ನೆಲೆ: ನಾಳೆ ಪೂರ್ವಭಾವಿ ಸಭೆ

■ ವಿಜಯಸಾಕ್ಷಿ ಸುದ್ದಿ, ಗದಗ



ಕನೇರಿಮಠದ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮಿಗಳ ನೇತೃತ್ವದಲ್ಲಿ ನಗರದಲ್ಲಿ ನಡೆಯಲಿರುವ ಸಮ ಸಮಾಜ ನಿರ್ಮಾಣಕ್ಕಾಗಿ ಬಸವಾದಿ ಶಿವಶರಣರ ಬೃಹತ್ ಹಿಂದೂ ಸಮಾವೇಶದ ಪೂರ್ವಭಾವಿ ಸಭೆ ಕರೆಯಲಾಗಿದೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಹಿಂದೂ ವೀರಶೈವ ಲಿಂಗಾಯತ ಯುವ ವೇದಿಕೆಯ ರಾಜ್ಯ ಸಂಚಾಲಕ ರಾಜು ಖಾನಪ್ಪನವರ, ಮೇ 3ರಂದು ಭಾನುವಾರ ಸಂಜೆ 5 ಗಂಟೆಗೆ ಗದಗ ನಗರದ ರಾಚೋಟಿ ವೀರಭದ್ರೇಶ್ವರ ದೇವಸ್ಥಾನದಲ್ಲಿ ಪೂರ್ವಭಾವಿ ಸಭೆ ನಡೆಯಲಿದೆ ಎಂದು ತಿಳಿಸಿದ್ದಾರೆ.

ಸಭೆಯಲ್ಲಿ ಮೇ 31, 2026ರಂದು ಜರುಗಲಿರುವ ಬಸವಾದಿ ಶಿವಶರಣರ ಬೃಹತ್ ಹಿಂದೂ ಸಮಾವೇಶದ ಕುರಿತು ಚರ್ಚೆ ನಡೆಯಲಿದ್ದು, ಕಾರ್ಯಕ್ರಮದ ರೂಪರೇಷೆ, ಪದಾಧಿಕಾರಿಗಳ ಆಯ್ಕೆ ಹಾಗೂ ಸಲಹೆ-ಸೂಚನೆಗಳನ್ನು ಸಂಗ್ರಹಿಸಲಾಗುವುದು ಎಂದು ಹೇಳಿದರು.

ಬಸವ ಶಿವಶರಣರ ಅನುಯಾಯಿಗಳು, ರೈತರು, ಹಿಂದೂ ಬಂಧುಗಳು, ಕಾಡಸಿದ್ದೇಶ್ವರ ಸ್ವಾಮಿಜಿಗಳ ಅಭಿಮಾನಿಗಳು ಹಾಗೂ ವಿವಿಧ ಸಂಘಟನೆಗಳ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ರಾಜು ಖಾನಪ್ಪನವರ ಮನವಿ ಮಾಡಿದ್ದಾರೆ.

---

**ಫಕೀರೇಶ್ವರರ ಮಹಾರಥೋತ್ಸವದಲ್ಲಿ ಭಕ್ತರ ಜೈಕಾರ-ಮುಗಿಲು ಮುಟ್ಟಿದ 'ಹರ ಹರ ಮಹಾದೇವ' ಘೋಷಣೆ**

# ಕೋಮು ಸೌಹಾರ್ದತೆಯ ಸಂದೇಶ ಮೊಳಗಿದ ಜಾತ್ರೆ

■ ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ಕೋಮು-ಸೌಹಾರ್ದತೆಯ ಹರಿಕಾರ, "ದ್ವೇಷ ಬಿಡುಪ್ರೀತಿ ಮಾಡು" ಎಂಬ ದಿವ್ಯ ಸಂದೇಶ ಸಾರಿದ ಕರ್ತೃ ಶ್ರೀ ಜ. ಫಕೀರೇಶ್ವರರು ಶಿರಹಟ್ಟಿಯಲ್ಲಿ ಸರ್ಪರೂಪಿಯಾಗಿ ನೆಲೆನಿಂತಿದ್ದು, ಅವರ ಮಹಾರಥೋತ್ಸವವು ಹುಣ್ಣಿಮೆಯ ಶುಕ್ರವಾರ ಸಂಜೆ ಸುಮಾರು 5 ಗಂಟೆಗೆ ಸಹಸ್ರಾರು ಭಕ್ತರ "ಹರ ಹರ ಮಹಾದೇವ ಫಕೀರೇಶ್ವರ ಮಹಾರಾಜಕೀ ಜೈ" ಎಂಬ ಜಯಘೋಷದೊಂದಿಗೆ ಮುಗಿಲು ಮುಟ್ಟಿತು.

ಶುಕ್ರವಾರ ಬೆಳಿಗ್ಗೆ ಸುಮಾರು 9 ಗಂಟೆಗೆ ಶ್ರೀಮಠದ 13ನೇ ಪೀಠಾಧ್ಯಕ್ಷ ಜ.ಫ. ಸಿದ್ದರಾಮ ಸ್ವಾಮೀಜಿ ಪರಂಪರೆಯಂತೆ ಹರಿಪೂರ ಗ್ರಾಮದಿಂದ ಶಿರಹಟ್ಟಿ ಪಟ್ಟಣಕ್ಕೆ ಪುರಪ್ರವೇಶ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಸಡಗರ ಸಂಭ್ರಮದಿಂದ ಪಲ್ಲಕ್ಕಿ ಮಹೋತ್ಸವ ಜರುಗಿತು. ಮೇಗೇರಿ ಓಣಿಯಲ್ಲಿರುವ ಕರ್ತೃ ಶ್ರೀ ಜ. ಫಕೀರೇಶ್ವರರ ಗದ್ದುಗೆಗೆ ಪೂಜೆ ಸಲ್ಲಿಸಿ, ನಂತರ ಸಂಪ್ರದಾಯದಂತೆ ಶೆಟ್ಟರ ಮನೆಗಳಿಗೆ ತೆರಳಿ ಪ್ರಸಾದ ಸ್ವೀಕರಿಸಿದರು. ಸಂಜೆ 4.30ರ ಸುಮಾರಿಗೆ ಭವ್ಯ ಮೆರವಣಿಗೆಯ ಮೂಲಕ ಜ.ಫ. ಸಿದ್ದರಾಮ ಸ್ವಾಮೀಜಿ ಶ್ರೀಮಠ ತಲುಪಿದರು.



**ಕೇಸರಿ-ಬಿಳಿ-ಹಸಿರು ಬಣ್ಣದಲ್ಲಿ ರಾರಾಜಿಸಿದ ರಥ**

"ದೇವನೊಬ್ಬ, ನಾಮ ಹಲವು" ಎಂಬ ತತ್ವದಡಿ ಸಮಾಜದಲ್ಲಿ ಸಾಮರಸ್ಯ ಮೂಡಿಸಲು ಕರ್ತೃ ಶ್ರೀ ಜ. ಫಕೀರೇಶ್ವರರು ಹಿಂದೂ-ಮುಸ್ಲಿಂ ರಾಜ-ರಿಂದ ಬಿರುದಾವಳಿಗಳನ್ನು ಪಡೆದು ಕೋಮು ಸೌಹಾರ್ದತೆಯ ಹರಿಕಾರರಾಗಿದ್ದಾರೆ. ಅದೇ ಮಾದರಿಯಲ್ಲಿ ರಥವು ರಾಷ್ಟ್ರಧ್ವಜದ ಕೇಸರಿ-ಬಿಳಿ-ಹಸಿರು ಬಣ್ಣಗಳಲ್ಲಿ ಕಂಗೊಳಿಸಿತು. ರಾಜಪೋಷಾಕು ಹಾಗೂ ರತ್ನಖಚಿತ ವಜ್ರ ವೈಢೂರ್ಯ ಧರಿಸಿದ್ದ ಜ.ಫ. ಸಿದ್ದರಾಮ ಶ್ರೀಗಳು ಹಾಗೂ ಉತ್ತರಾಧಿಕಾರಿ ಜ.ಫ. ದಿಂಗಾಲೇಶ್ವರ ಸ್ವಾಮೀಜಿ ರಥದ ಗಾಲಿಗೆ ಪೂಜೆ ಸಲ್ಲಿಸಿ ರಥೋತ್ಸವಕ್ಕೆ ಚಾಲನೆ ನೀಡಿದರು. ಸುಮಾರು 1 ಕಿಮೀ ದೂರದ ಪಾದಗಟ್ಟಿವರೆಗೆ ರಥ ಸಾಗಿದ್ದು, ಬಳಿಕ ಮರಳಿ ಆಗಮಿಸಿ ರಥೋತ್ಸವಕ್ಕೆ ತೆರೆ ಬಿತ್ತು. ಈ ವೇಳೆ ವಿವಿಧ ವಾದ್ಯಗೋಷ್ಠಿಗಳು ಮೊಳಗಿದವು.

ಉತ್ತರ ಕರ್ನಾಟಕದಲ್ಲಿಯೇ ವಿಶೇಷವಾಗಿ ಜರುಗುವ ಈ ಜಾತ್ರೆಗೆ ನೆರೆಯ ಜಿಲ್ಲೆಗಳು ಹಾಗೂ ಹೊರ ರಾಜ್ಯಗಳಿಂದಲೂ ಸಹಸ್ರಾರು ಭಕ್ತರು ಆಗಮಿಸಿದ್ದರು. ಮುಂಜಾಗ್ರತವಾಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರೋಹನ್ ಜಗದೀಶ್ ಅವರ ನಿರ್ದೇಶನದಂತೆ ಡಿಎಸ್‌ಪಿ ಮುರ್ತುಜಾ ಖಾದ್ರಿ ನೇತೃತ್ವದಲ್ಲಿ ಅಗತ್ಯ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿತ್ತು. ಸಿಪಿಐ ಬಿ.ವಿ. ನ್ಯಾಮಗೌಡ, ಪಿಎಸ್ಐ ಈರಪ್ಪ ರಿತ್ತಿ, ಡಿಎಆರ್, ಕೆಎಸ್‌ಆರ್‌ಪಿ ಹಾಗೂ ಸ್ಥಳೀಯ ಪೊಲೀಸ್ ಸಿಬ್ಬಂದಿ ಕರ್ತವ್ಯ ನಿರ್ವಹಿಸಿದರು.

> **ಕರಿದ ಚುರುಮರಿ ಸವಿದ ಭಕ್ತರು**
>
> ಜಾತ್ರೆಯ ವಿಶೇಷತೆಯಾದ ಕರಿದ ಚುರುಮರಿ ಇಲ್ಲಿ ಪ್ರಸಿದ್ಧವಾಗಿದ್ದು, ಜಾತ್ರೆಗೆ ಆಗಮಿಸುವ ಭಕ್ತರು ಅದನ್ನು ಸವಿಯದೇ ಇರಲಿಲ್ಲ. ರಥೋತ್ಸವದ ನಂತರ ಭಕ್ತರು ಕರಿದ ಚುರುಮರಿ, ಬಿಸಿ ಭಜ್ಜಿ ಹಾಗೂ ಮಿರ್ಚಿ ಸವಿದು ತಮ್ಮ ಕುಟುಂಬ ಹಾಗೂ ಸ್ನೇಹಿತರೊಂದಿಗೆ ಸಂಭ್ರಮಿಸಿದರು. ಚಿಕ್ಕ ಮಕ್ಕಳಿಗೂ ವಿವಿಧ ಆಟೋಪಕರಣಗಳು ಮನರಂಜನೆ ನೀಡಿದವು.

---

**ಅತಿಥಿ ಉಪನ್ಯಾಸಕರಿಗೆ ಉದ್ಯೋಗ ಭದ್ರತೆ ಬೇಡಿಕೆ; ಸರ್ಕಾರದ ಕ್ರಮಕ್ಕೆ ತೀವ್ರ ಟೀಕೆ, ಹೋರಾಟದ ಎಚ್ಚರಿಕೆ**

## ಹೆಸರು ಬದಲಿಸಿದರೆ ಹೊಟ್ಟೆ ತುಂಬಲ್ಲ



■ ವಿಜಯಸಾಕ್ಷಿ ಸುದ್ದಿ, ಗದಗ

ಉನ್ನತ ಶಿಕ್ಷಣ ಇಲಾಖೆಯಲ್ಲಿ ದಶಕಗಳಿಂದ ಸೇವೆ ಸಲ್ಲಿಸುತ್ತಿರುವ ಅತಿಥಿ ಉಪನ್ಯಾಸಕರಿಗೆ ಕೇವಲ ಹುದ್ದೆಯ ಹೆಸರನ್ನು ಬದಲಾಯಿಸುವ ಮೂಲಕ 'ಮೂಗಿಗೆ ತುಪ್ಪ ಸವರುವ' ಕೆಲಸವನ್ನು ಸರ್ಕಾರ ಮಾಡುತ್ತಿದೆ ಎಂದು ಅತಿಥಿ ಉಪನ್ಯಾಸಕರ ಸಂಘದ ರಾಜ್ಯಾಧ್ಯಕ್ಷ ಡಾ. ಹನುಮಂತಗೌಡ ಕಲ್ಮನಿ ಆಕ್ರೋಶ ವ್ಯಕ್ತಪಡಿಸಿದರು.

▶▶ 3ನೇ ಪುಟಕ್ಕೆ

> **ಭರವಸೆ ಈಡೇರಿಸಿ**
>
> ಸಿದ್ದರಾಮಯ್ಯ ಅವರು ವಿರೋಧ ಪಕ್ಷದ ನಾಯಕರಾಗಿದ್ದಾಗ ಅತಿಥಿ ಉಪನ್ಯಾಸಕರನ್ನು ಕಾಯಂಗೊಳಿಸುವಂತೆ ಸಲಹೆ ನೀಡಿದ್ದರು. ಕಾಂಗ್ರೆಸ್ ಪಕ್ಷವು ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಅರ್ಹತೆ ಹಾಗೂ ಸೇವಾನುಭವದ ಆಧಾರದ ಮೇಲೆ ಸೇವಾ ಭದ್ರತೆ ನೀಡುವುದಾಗಿ ಭರವಸೆ ನೀಡಿತ್ತು. ಈಗ ಸರ್ಕಾರ ನುಡಿದಂತೆ ನಡೆಯಬೇಕು ಎಂದು ಹನುಮಂತಗೌಡ ಕಲ್ಮನಿ ಒತ್ತಾಯಿಸಿದರು.

---

**"ಕಾರ್ಮಿಕ ದಿನಾಚರಣೆಯಲ್ಲಿ ಹಲವು ಘೋಷಣೆಗಳು; ಸಚಿವ ಪಾಟೀಲರಿಂದ ಕಾರ್ಮಿಕರ ಮಕ್ಕಳಿಗೆ ವಸತಿ ಶಾಲೆ, ಶೈಕ್ಷಣಿಕ ಕಿಟ್ ವಿತರಣೆ**

# ಕಟ್ಟಡ ಕಾರ್ಮಿಕರಿಗೆ ಸರ್ಕಾರದ ಯೋಜನೆಗಳು ಶ್ರೀರಕ್ಷೆ

■ ವಿಜಯಸಾಕ್ಷಿ ಸುದ್ದಿ, ಗದಗ

"ದೇಶದ ಭವ್ಯ ಭವಿಷ್ಯವನ್ನು ನಿರ್ಮಿಸುವಲ್ಲಿ ಕಟ್ಟಡ ಕಾರ್ಮಿಕರ ಪಾತ್ರ ಅನನ್ಯ. ಅಹರ್ನಿಶಿ ದುಡಿಯುವ ಕಾರ್ಮಿಕರ ಹಿತರಕ್ಷಣೆಗಾಗಿ ಸರ್ಕಾರ ಜಾರಿಗೆ ತಂದಿರುವ ವಿವಿಧ ಯೋಜನೆಗಳು ಅವರಿಗೆ ಶ್ರೀರಕ್ಷೆಯಾಗಿದೆ" ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ ಹೇಳಿದರು.

ನಗರದ ಡಿ.ಸಿ. ಮಿಲ್ ಕಂಪೌಂಡ್ ಒಳಗಡೆ ಕೆ.ಎಚ್. ಪಾಟೀಲ ನಗರದಲ್ಲಿ ಕಟ್ಟಡ ನಿರ್ಮಾಣ ಕಾರ್ಮಿಕರ ಮಹಾಸಂಘ (ಗದಗ-ಬೆಟಗೇರಿ) ವತಿಯಿಂದ ಆಯೋಜಿಸಿದ್ದ ಕಾರ್ಮಿಕ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಎಸ್ಎಸ್ಎಲ್‌ಸಿ ಹಾಗೂ ಪಿಯುಸಿಯಲ್ಲಿ ಶೇ.85ಕ್ಕೂ ಹೆಚ್ಚು ಅಂಕ ಪಡೆದ ಕಟ್ಟಡ ಕಾರ್ಮಿಕರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ




ನೀಡಿ ಗೌರವಿಸಲಾಯಿತು. ಕಾರ್ಮಿಕರ ಮಕ್ಕಳು ಶಿಕ್ಷಣದಲ್ಲಿ ಮುಂಚೂಣಿಗೆ ಬರಬೇಕು ಎಂದು ಸಚಿವರು ತಿಳಿಸಿದರು.

ರಸ್ತೆಗಳು, ಫ್ಲೈಓವರ್‌ಗಳು, ಕಾಲೇಜುಗಳು, ಮ್ಯೂಸಿಯಂಗಳು ಹಾಗೂ ದೇವಾಲಯಗಳನ್ನು ನಿರ್ಮಿಸುವಲ್ಲಿ ಕಾರ್ಮಿಕರ ಶ್ರಮ ಅಪಾರವಾಗಿದೆ. ಸಾವಿರಾರು ವರ್ಷಗಳ ಕಾಲ ಉಳಿಯುವ ಸ್ಮಾರಕಗಳ ಹಿಂದೆ ಅವರ ಬೆವರು ಮತ್ತು ತ್ಯಾಗವಿದೆ ಎಂದು ಅವರು ಭಾವುಕರಾಗಿ ನುಡಿದರು.

> "ಕಟ್ಟಡ ಕಾರ್ಮಿಕ ಕಾರ್ಡ್ ಕೇವಲ ಗುರುತಿನ ಚೀಟಿಯಲ್ಲ, ಅದು ಕಾರ್ಮಿಕರ ಬದುಕಿಗೆ ಭದ್ರತೆಯ ಆಧಾರ."
> **– ಸಚಿವ ಎಚ್.ಕೆ. ಪಾಟೀಲ**

ಕಾರ್ಮಿಕ ಕಲ್ಯಾಣ ಕಾನೂನುಗಳ ಜಾರಿಗೆ ಆಸ್ಕರ್ ಫರ್ನಾಂಡಿಸ್ ಹಾಗೂ ಮಲ್ಲಿಕಾರ್ಜುನ ಖರ್ಗೆ ಅವರ ಕೊಡುಗೆ ಅಪಾರವಾಗಿದೆ ಎಂದು ಸಚಿವರು ಸ್ಮರಿಸಿದರು.

"ಕಟ್ಟಡ ಕಾರ್ಮಿಕ ಕಾರ್ಡ್ ಕೇವಲ ಒಂದು ಚೀಟಿಯಲ್ಲ, ಅದು ಸರ್ಕಾರಿ ನೌಕರಿಯಷ್ಟೇ ಭದ್ರತೆ ನೀಡುವ ದಾಖಲೆ. ಕೊರೊನಾ ಕಾಲದಲ್ಲಿ ಈ ಕಾರ್ಡ್ ಮೂಲಕ ದೊರೆತ ನೆರವು ಮಹತ್ವದ್ದಾಗಿತ್ತು" ಎಂದರು. ಅರ್ಹರು ಕಾರ್ಡ್‌ಗಾಗಿ ಅರ್ಜಿ ಸಲ್ಲಿಸಿದರೆ ಒಂದು ವಾರದಲ್ಲಿ ವಿತರಣೆ ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

▶▶ 3ನೇ ಪುಟಕ್ಕೆ

> **ಶೈಕ್ಷಣಿಕ ಕಿಟ್‌ಗಳ ವಿತರಣೆ**
>
> ರಾಜ್ಯಾದ್ಯಂತ ಕಟ್ಟಡ ಕಾರ್ಮಿಕರ ಮಕ್ಕಳಿಗೆ ಸುಮಾರು ರೂ.1111 ಕೋಟಿ ವೆಚ್ಚದಲ್ಲಿ ಶೈಕ್ಷಣಿಕ ಕಿಟ್‌ಗಳನ್ನು ವಿತರಿಸಲು ಸಚಿವ ಸಂಪುಟ ಅನುಮೋದನೆ ನೀಡಿದೆ ಎಂದು ಸಚಿವ ಎಚ್.ಕೆ. ಪಾಟೀಲ ತಿಳಿಸಿದರು.

> **ಕಾರ್ಮಿಕರ ಮಕ್ಕಳಿಗೆ ವಸತಿ ಶಾಲೆ**
>
> ಗದಗ ಜಿಲ್ಲೆಯಲ್ಲೇ ಕಾರ್ಮಿಕರ ಮಕ್ಕಳಿಗಾಗಿ ಸುಸಜ್ಜಿತ ವಸತಿ ಶಾಲೆಗೆ ಅನುಮೋದನೆ ದೊರೆತಿದ್ದು, ನಗರದ ಸಮೀಪದ ಗುಡ್ಡ ಪ್ರದೇಶದಲ್ಲಿ 10 ಎಕರೆ ಭೂಮಿ ಗುರುತಿಸಲಾಗಿದೆ. ಇದೇ ವರ್ಷ ಭೂಮಿಪೂಜೆ ನೆರವೇರಿಸಿ, ಮುಂದಿನ ಶೈಕ್ಷಣಿಕ ವರ್ಷದಿಂದಲೇ ಶಾಲೆ ಆರಂಭಿಸುವಂತೆ ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವ ಎಚ್.ಕೆ. ಪಾಟೀಲ ಹೇಳಿದರು.



ಗದಗ: ನಗರದ ಚಿಕ್ಕಲಗೇರಿ ಸಂಭಾಪುರ ರಸ್ತೆಯ ವಾರ್ಡ್ ನಂ. 27ರಲ್ಲಿ ಅಂಗನವಾಡಿ ಕೇಂದ್ರವನ್ನು ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ ಅವರು ಟೇಪ್ ಕತ್ತರಿಸುವ ಮೂಲಕ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಅಕ್ಬರಸಾಬ ಬಬರ್ಚಿ, ಬಿ.ಬಿ. ಅಸೂಟಿ, ಅಶೋಕ ಮಂದಾಲಿ ಉಪಸ್ಥಿತರಿದ್ದರು.



ಗದಗ-ಬೆಟಗೇರಿ: ನಗರಸಭೆಯ ಗಂಗಿಮಡಿ ವಾರ್ಡ್ ನಂ. 22ರಲ್ಲಿ ಮಾದರಿ ಅಂಗನವಾಡಿ ಕೇಂದ್ರ 319ರ ಭೂಮಿಪೂಜೆಗೆ ಜಿಲ್ಲಾ ಉಸ್ತುವಾರಿ ಸಚಿವ ಎಚ್. ಕೆ. ಪಾಟೀಲ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಅಕ್ಬರಸಾಬ್ ಬಬರ್ಚಿ, ಬಿ.ಬಿ. ಅಸೂಟಿ, ಅಶೋಕ ಮಂದಾಲಿ ಉಪಸ್ಥಿತರಿದ್ದರು.



ಗದಗ: ನಗರದ ಉಪವಿಭಾಗಾಧಿಕಾರಿಗಳ ಕಚೇರಿ ಎದುರು, ಮುಳಗುಂದ ನಾಕಾ ಹತ್ತಿರ ವಾಯವ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಗದಗ ವಿಭಾಗ) ವತಿಯಿಂದ ಖಅಕ/ಖಿಖಕ ಅನುದಾನದಡಿ ನಿರ್ಮಿಸಲಾದ ವಾಣಿಜ್ಯ ಮಳಿಗೆಗಳನ್ನು ಜಿಲ್ಲಾ ಉಸ್ತುವಾರಿ ಸಚಿವ ಎಚ್. ಕೆ. ಪಾಟೀಲ ಅವರು ಟೇಪ್ ಕತ್ತರಿಸುವ ಮೂಲಕ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಡಾ. ದುರಗೇಶ್ ಕೆ.ಆರ್., ಅಕ್ಬರಸಾಬ್ ಬಬರ್ಚಿ, ಬಿ.ಬಿ. ಅಸೂಟಿ, ಅಶೋಕ ಮಂದಾಲಿ ಉಪಸ್ಥಿತರಿದ್ದರು.

**ನರಸಾಪೂರದಲ್ಲಿ ಜಂಗಮ ವಟುಗಳಿಗೆ ಅಯ್ಯಾಚಾರ ಲಿಂಗದೀಕ್ಷೆ; 25 ವಟುಗಳಿಗೆ ದೀಕ್ಷೆ, 10 ಭಕ್ತರಿಗೆ ಲಿಂಗದೀಕ್ಷೆ**

# ಅಯ್ಯಾಚಾರ-ಲಿಂಗದೀಕ್ಷೆ ಧಾರ್ಮಿಕ ಜವಾಬ್ದಾರಿಯ ಪ್ರಕ್ರಿಯೆ



■ **ವಿಜಯಸಾಕ್ಷಿ ಸುದ್ದಿ, ಗದಗ**

ಅಯ್ಯಾಚಾರವೆಂಬುದು ಆಚಾರ, ವಿಚಾರ ಹಾಗೂ ಶಿವಾಚಾರವನ್ನು ಪಾಲಿಸುವ ಜವಾಬ್ದಾರಿಯನ್ನು ವಹಿಸುವ ಧಾರ್ಮಿಕ ಪ್ರಕ್ರಿಯೆಯಾಗಿದ್ದು, ವೀರಶೈವ ಲಿಂಗಾಯತ ಸಂಪ್ರದಾಯದಲ್ಲಿ ಮಹತ್ವದ್ದಾಗಿದೆ ಎಂದು ಬನ್ನಿಕೊಪ್ಪದ ಡಾ. ಸುಜ್ಞಾನದೇವ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ತಾಲೂಕಿನ ನರಸಾಪೂರ ಗ್ರಾಮದ ರಂಭಾಪೂರಿ ಶಾಖಾ ಹಿರೇಮಠ ಗುರುಕುಲದಲ್ಲಿ ಪಂಚವಟಿ ಧಾರ್ಮಿಕ ಗುರುಕುಲ ಜನಕಲ್ಯಾಣ ಟ್ರಸ್ಟ್ ಹಾಗೂ ಅಖಿಲ ಭಾರತ ಜಂಗಮ ಸೇವಾ ಸಮಿತಿ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಜಂಗಮ ವಟುಗಳಿಗೆ ಅಯ್ಯಾಚಾರ ಹಾಗೂ ಲಿಂಗದೀಕ್ಷೆ ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಅಯ್ಯಾಚಾರವು ಜಂಗಮ ವಟುಗಳಿಗೆ ನೀಡಲಾಗುವ ವಿಶೇಷ ದೀಕ್ಷಾ ಸಂಸ್ಕಾರವಾಗಿದ್ದು, ಶಿವದೀಕ್ಷೆಗೆ ಸಮಾನವಾದ ಮಹತ್ವವನ್ನು ಹೊಂದಿದೆ. ಶಿವದೀಕ್ಷೆ ಪಡೆದವರಿಗೆ ದೈವಿಕ ಗುಣಗಳು ವೃದ್ಧಿಯಾಗುತ್ತವೆ. ಧರ್ಮಾಚರಣೆ ಮೂಲಕ ಲಿಂಗದೀಕ್ಷೆ ಸ್ವೀಕರಿಸಿದವರು ಸನ್ಮಾರ್ಗದಲ್ಲಿ ನಡೆಯಬೇಕು ಎಂದು ತಿಳಿಸಿದರು.

> "ಶಿವದೀಕ್ಷೆ ಪಡೆದವರು ಧರ್ಮಪರಿಪಾಲನೆ ಮಾಡಿ ಸನ್ಮಾರ್ಗದಲ್ಲಿ ನಡೆಯುವುದು ಅಗತ್ಯ."
> **– ಡಾ. ಸುಜ್ಞಾನದೇವ** ಶಿವಾಚಾರ್ಯ ಸ್ವಾಮೀಜಿ

ವೀರಶೈವ ಸಂಪ್ರದಾಯದಂತೆ ಜಂಗಮ ವಟುಗಳಿಗೆ ನೀಡುವ ಶಿವದೀಕ್ಷೆ (ಅಯ್ಯಾಚಾರ) ಪದ್ಧತಿಯನ್ನು ಉಳಿಸಿಕೊಂಡು ಹೋಗುವುದು ಜಂಗಮ ಸಮುದಾಯದ ಕರ್ತವ್ಯವಾಗಿದೆ. ಪೂರ್ವಜರ ಆಚಾರ-ವಿಚಾರಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಧರ್ಮ ರಕ್ಷಣೆಗೆ ಮುಂದಾಗಬೇಕು ಎಂದು ಕರೆ ನೀಡಿದರು. ಇಂದಿನ ದಿನಗಳಲ್ಲಿ ಉಚಿತವಾಗಿ ಅಯ್ಯಾಚಾರ ಮತ್ತು ಲಿಂಗದೀಕ್ಷೆ ನೀಡುತ್ತಿರುವುದು ಹೆಮ್ಮೆಯ ವಿಷಯವಾಗಿದ್ದು, ಇಂತಹ ಧಾರ್ಮಿಕ ಕಾರ್ಯಕ್ರಮಗಳು ನಿರಂತರವಾಗಿ ನಡೆಯಲಿ ಎಂದರು.

ಮಲ್ಲನಕೇರಿ ವಿರಕ್ತಮಠದ ಚನ್ನಬಸವ ಸ್ವಾಮೀಜಿ ಮಾತನಾಡಿ, 30 ದಿನಗಳ ಉಚಿತ ಸಂಸ್ಕಾರ ತರಬೇತಿ ಹಮ್ಮಿ ಕೊಂಡಿರುವುದು ಶ್ಲಾಘನೀಯ. ಇಂತಹ ಕಾರ್ಯಕ್ರಮಗಳು ಮಕ್ಕಳಲ್ಲಿ ಧಾರ್ಮಿಕ ಅರಿವು ಹೆಚ್ಚಿಸಲು ಸಹಕಾರಿಯಾಗುತ್ತವೆ ಎಂದು ಹೇಳಿದರು.

ಅಖಿಲ ಭಾರತ ಜಂಗಮ ಸೇವಾ ಸಮಿತಿಯ ಅಧ್ಯಕ್ಷ ಪ್ರಭಯ್ಯ ದಂಡಾವತಿಮಠ ಅಧ್ಯಕ್ಷತೆ ವಹಿಸಿ ಮಾತನಾಡಿ, ಗುರುಕುಲದೊಂದಿಗೆ ಕೈಜೋಡಿಸಿ ಪ್ರತಿವರ್ಷವೂ ಇಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಧಾರ್ಮಿಕತೆಯ ಮಹತ್ವವನ್ನು ಜನರಿಗೆ ತಿಳಿಸುವ ಕಾರ್ಯ ಮುಂದುವರಿಸಲಾಗುವುದು ಎಂದರು.

ಪಂಚವಟಿ ಧಾರ್ಮಿಕ ಗುರುಕುಲ ಜನಕಲ್ಯಾಣ ಟ್ರಸ್ಟ್‌ನ ಅಧ್ಯಕ್ಷ ಡಾ. ವೀರಭದ್ರ ಶಿವಾಚಾರ್ಯ ಸ್ವಾಮೀಜಿ ನೇತೃತ್ವ ವಹಿಸಿ ಮಾತನಾಡಿ, ಪ್ರತಿಯೊಂದು ಜನಾಂಗದಲ್ಲೂ ಧಾರ್ಮಿಕ ಮೌಲ್ಯಗಳ ಅರಿವು ಮೂಡಿಸಿ, ಅದನ್ನು ಸರಿಯಾಗಿ ಪಾಲಿಸುವುದು ಸಮಾಜದ ಉನ್ನತಿಗೆ ಕಾರಣವಾಗುತ್ತದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮಂಜುನಾಥ ಹಳ್ಳೂರಮಠ, ಮೃತ್ಯುಂಜಯ ಭಿಕ್ಷಾವತಿಮಠ, ತೋಟಯ್ಯ ಗುಡ್ಡಿಮಠ, ಕೆ.ಎಸ್. ಹಿರೇಮಠ, ವೀರಯ್ಯ ಹೊಸಮಠ, ಲಿಂಗಯ್ಯ ಹಿರೇಮಠ, ವೀರಬಸಯ್ಯ ವಿರಕ್ತಮಠ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

**ಲಕ್ಷ್ಮೇಶ್ವರದಲ್ಲಿ ಕಾರ್ಯಾಗಾರ; ಅನಕ್ಷರಸ್ಥರಿಗೆ ಅಕ್ಷರಜ್ಞಾನ ನೀಡಲು ಬೋಧಕರಿಗೆ ಜವಾಬ್ದಾರಿ**

# ಅನಕ್ಷರತೆ ನಿರ್ಮೂಲನೆಗೆ ಸ್ವಯಂಸೇವಕ ಬೋಧಕರಿಗೆ ತರಬೇತಿ

■ **ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಜಿಲ್ಲಾ ಲೋಕ ಶಿಕ್ಷಣ ಸಮಿತಿ ಗದಗ, ಶಾಲಾ ಶಿಕ್ಷಣ ಇಲಾಖೆ, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಗದಗ ಹಾಗೂ ಜಿಲ್ಲಾ ವಯಸ್ಕರ ಶಿಕ್ಷಣ ಇಲಾಖೆ ಗದಗ ಸಹಯೋಗದಲ್ಲಿ ತಾಲ್ಲೂಕು ಪಂಚಾಯಿತಿಯೊಂದಿಗೆ ಪಟ್ಟಣದ ಪಿಎಂಶ್ರೀ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ನಂ.4ರಲ್ಲಿ ನವ ಭಾರತ ಸಾಕ್ಷರತಾ ಕಾರ್ಯಕ್ರಮದಡಿ ಸ್ವಯಂಸೇವಕ ಬೋಧಕರ ತರಬೇತಿ ಕಾರ್ಯಾಗಾರ ಜರುಗಿತು.



ಕಾರ್ಯಾಗಾರವನ್ನು ಉದ್ಘಾಟಿಸಿದ ಬಿಇಓ ಎಚ್. ಎನ್. ನಾಯ್ಕ ಮಾತನಾಡಿ, ಅನಕ್ಷರಸ್ಥ ಕಲಿಕಾರ್ಥಿಗಳ ಓದು, ಬರಹ, ಲೆಕ್ಕಾಚಾರ, ಅರಿವು ಮತ್ತು ಕ್ರಿಯಾಶೀಲತೆಯನ್ನು ಅಭಿವೃದ್ಧಿಪಡಿಸಲು "ಬಾಳಿಗೆ ಬೆಳಕು" ಪುಸ್ತಕವನ್ನು ಸಿದ್ಧಪಡಿಸಲಾಗಿದೆ. ಈ ಆಧಾರದ ಮೇಲೆ ಅನುಷ್ಠಾನಾಧಿಕಾರಿಗಳು ಮತ್ತು ಬೋಧಕರಿಗೆ ಪರಿಣಿತ ತಂಡದ ಮೂಲಕ ತರಬೇತಿ ನೀಡಲಾಗುತ್ತಿದೆ ಎಂದರು.

> "ಪ್ರತಿ ಬೋಧಕರೂ ತಮ್ಮ ವ್ಯಾಪ್ತಿಯಲ್ಲಿ ಕನಿಷ್ಠ 20 ಅನಕ್ಷರಸ್ಥರಿಗೆ ಅಕ್ಷರಜ್ಞಾನ ನೀಡಬೇಕು."
> **– ಬಸವರಾಜ ಯರಗುಪ್ಪಿ**

ಕ್ಷೇತ್ರ ಸಂಪನ್ಮೂಲ ವ್ಯಕ್ತಿ ಬಸವರಾಜ ಯರಗುಪ್ಪಿ ಮಾತನಾಡಿ, ವಿದ್ಯಾವಂತ ಸಮುದಾಯವು ಕಲಿಯದವರಿಗೆ ಅಕ್ಷರಜ್ಞಾನ ನೀಡುವ ಹೊಣೆ ಹೊತ್ತಿದ್ದು, ಪ್ರತಿ ಸ್ವಯಂಸೇವಕ ಬೋಧಕರು ತಮ್ಮ ವ್ಯಾಪ್ತಿಯಲ್ಲಿ ಗುರುತಿಸಿರುವ ಕನಿಷ್ಠ 20 ಅನಕ್ಷರಸ್ಥರಿಗೆ ಓದು-ಬರಹ ಕಲಿಸಲು ಮುಂದಾಗಬೇಕು ಎಂದು ಹೇಳಿದರು.

ಲಕ್ಷ್ಮೇಶ್ವರ ಉತ್ತರ ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿ ಉಮೇಶ ನೇಕಾರ ಪ್ರಾಸ್ತಾವಿಕವಾಗಿ ಮಾತನಾಡಿದರು. ಕ್ಷೇತ್ರ ಸಮನ್ವಯಾಧಿಕಾರಿ ಬಿ.ಎಸ್. ಭಜಂತ್ರಿ, ಮುಖ್ಯ ಶಿಕ್ಷಕರಾದ ಬಿ.ಎಂ. ಕುಂಬಾರ, ಕೆ.ಡಿ. ಕಗ್ಗಲಗೌಡರ, ಕೆ.ಬಿ. ಗೊಜನೂರ, ಎಸ್.ಸಿ. ಹುಲಿಕಂತಿಮಠ, ಎಸ್. ಕೆ. ಚಾಂದಖಾನವರ, ಎನ್.ಪಿ. ಪ್ಯಾಟಿಗೌಡರ, ಎನ್.ಎ. ಮುಲ್ಲಾ, ಶ್ರೀನಿವಾಸ ಮತ್ತೂರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಕಾರ್ಮಿಕರ ಹಕ್ಕುಗಳ ಅರಿವು ಅಗತ್ಯ

■ **ವಿಜಯಸಾಕ್ಷಿ ಸುದ್ದಿ, ಹಗರಿಬೊಮ್ಮನಹಳ್ಳಿ**

ತಾಲೂಕು ಕಟ್ಟಡ ಕಾರ್ಮಿಕ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಅಂತಾರಾಷ್ಟ್ರೀಯ ಕಾರ್ಮಿಕ ದಿನಾಚರಣೆಯನ್ನು ಆಚರಿಸಲಾಯಿತು.

ಕಾರ್ಯಕ್ರಮಕ್ಕೆ ಸಂಘದ ಅಧ್ಯಕ್ಷ ಯು. ಬಾಬುಬಲಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಕಾರ್ಮಿಕರ ಹಕ್ಕುಗಳ ರಕ್ಷಣೆಗೆ ಸಾಮಾಜಿಕ ಭದ್ರತೆ ಹಾಗೂ ಸರ್ಕಾರದ ಸೌಲಭ್ಯಗಳನ್ನು ಸಮರ್ಪಕವಾಗಿ ಪಡೆಯುವ ಅಗತ್ಯವಿದೆ ಎಂದು ಹೇಳಿದರು. ಕಟ್ಟಡ ಕಾರ್ಮಿಕರು ಸಮಾಜದ ಬೆನ್ನೆಲುಬಾಗಿದ್ದು, ಅವರ ಶ್ರಮದಿಂದಲೇ ದೇಶದ ಅಭಿವೃದ್ಧಿ ಸಾಧ್ಯವಾಗಿದೆ ಎಂದು ತಿಳಿಸಿದರು.



ಕಾರ್ಯಕ್ರಮದಲ್ಲಿ ಕಾರ್ಮಿಕರ ಕಲ್ಯಾಣಕ್ಕಾಗಿ ಜಾರಿಯಲ್ಲಿರುವ ವಿವಿಧ ಯೋಜನೆಗಳ ಬಗ್ಗೆ ಮಾಹಿತಿ ನೀಡಲಾಯಿತು. ಕಾರ್ಮಿಕರ ಕಾರ್ಡ್‌ಗಳ ನವೀಕರಣ (ರಿನಿವಲ್) ಕುರಿತು ತಿಳಿಸಿ, ಸರ್ಕಾರದ ಯೋಜನೆಗಳನ್ನು ಪ್ರತಿಯೊಬ್ಬರೂ ಸದುಪಯೋಗಪಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಗೌರವ ಅಧ್ಯಕ್ಷ ನಾಗರಾಜಪ್ಪ, ಎಂ. ಪಕ್ಕೀರಪ್ಪ, ಉಪ್ಪಾರ್ ಪ್ರಕಾಶ್, ಬಡಿಗೇರ್ ಸಿದ್ದಪ್ಪ, ಬಡಿಗೇರ್ ಬಸವರಾಜ್, ಮಡಿವಾಳರ ಅಶೋಕ್, ಮಾಬು ಪೀರ, ವಿ. ವಿಜಯಕುಮಾರ್, ವಿ. ವಜ್ರಪ್ಪ, ಆನಂದ್, ಉಪ್ಪಾರ್ ನಾಗರಾಜ್, ವೆಲ್ಡಿಂಗ್ ರಾಜಾ ಸಾಬ್, ಮಂಜಣ್ಣ ಚಿಂತರಪಳ್ಳಿ, ನರಸಿಂಹ ಸೇರಿದಂತೆ ಕಟ್ಟಡ ಕಾರ್ಮಿಕರು ಉಪಸ್ಥಿತರಿದ್ದರು.

**ಅಂಬೇಡ್ಕರ್ ವೃತ್ತದಲ್ಲಿ ಬಸವಣ್ಣ-ಅಂಬೇಡ್ಕರ್ ಜಯಂತಿ ಅಂಗವಾಗಿ ಬೃಹತ್ ಪ್ರತಿಭಟನೆ**

# ಜಾತಿ-ಲಿಂಗ ತಾರತಮ್ಯ ವಿರೋಧಿಸಿ ಶವಯಾತ್ರೆ, ಪ್ರತಿಕೃತಿ ದಹನ

■ **ವಿಜಯಸಾಕ್ಷಿ ಸುದ್ದಿ, ಹಗರಿಬೊಮ್ಮನಹಳ್ಳಿ**

ಪಟ್ಟಣದ ಅಂಬೇಡ್ಕರ್ ವೃತ್ತದಲ್ಲಿ ಬಸವಣ್ಣ ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ ಅಂಗವಾಗಿ ಜಾತಿ ತಾರತಮ್ಯ, ಅಸ್ಪೃಶ್ಯತೆ ಹಾಗೂ ಲಿಂಗ ಭೇದದ ವಿರುದ್ಧ ಬೃಹತ್ ಸಮಾವೇಶ ಮತ್ತು ಪ್ರತಿಭಟನೆ ನಡೆಯಿತು.

ಸಮಾವೇಶದಲ್ಲಿ ಮಾತನಾಡಿದ ಯು. ಬಸವರಾಜ್, ಆರ್.ಎಸ್. ಬಸವರಾಜ್, ಬಿ. ಮಾಳಮ್ಮ, ಎಸ್. ಜಗನ್ನಾಥ್ ಅವರು ಸಮಾಜದಲ್ಲಿ ಇನ್ನೂ ಮುಂದುವರಿಯುತ್ತಿರುವ ಜಾತಿ ಹಾಗೂ ಲಿಂಗ ತಾರತಮ್ಯಗಳನ್ನು ತೀವ್ರವಾಗಿ ಖಂಡಿಸಿದರು. ಸಮಾನತೆ, ಮಾನವೀಯತೆ ಮತ್ತು ನ್ಯಾಯದ ಮೌಲ್ಯಗಳನ್ನು ಅಳವಡಿಸಿಕೊಳ್ಳುವ ಅಗತ್ಯವಿದೆ ಎಂದು ಹೇಳಿದರು.

ನಂತರ ಪ್ರತಿಭಟನಾಕಾರರು ಅಂಬೇಡ್ಕರ್ ವೃತ್ತದವರೆಗೆ ಶವಯಾತ್ರೆ ನಡೆಸಿ, ಜಾತಿ ತಾರತಮ್ಯ, ಅಸ್ಪೃಶ್ಯತೆ ಮತ್ತು ಲಿಂಗ ಭೇದದ ವಿರುದ್ಧ ಪ್ರತಿಕೃತಿ ದಹನ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.



ಈ ಸಂದರ್ಭದಲ್ಲಿ ಯು. ಬಸವರಾಜ್ (ರಾಜ್ಯ ಅಧ್ಯಕ್ಷರು, ಪ್ರಾಂತ ರೈತ ಸಂಘ), ಬಿ. ಮಾಳಮ್ಮ (ರಾಜ್ಯ ಸಂಚಾಲಕರು, ಒಂಟಿ ಮಹಿಳೆಯರ ಸಂರಕ್ಷಣಾ ಸಂಘ), ಆರ್.ಎಸ್. ಬಸವರಾಜ್ (ರಾಜ್ಯ ಉಪಾಧ್ಯಕ್ಷರು), ಎಸ್. ಜಗನ್ನಾಥ್ (ಸಿಐಟಿಯು ಮುಖಂಡರು), ಎಂ. ಆನಂದ್ (ಸಂಚಾಲಕರು, ಪ್ರಾಂತ ರೈತ ಸಂಘ), ಪಿ. ಚಾಂದಬೀ (ಕಾರ್ಯದರ್ಶಿ, ದೇವದಾಸಿ ಮಹಿಳೆಯರ ವಿಮೋಚನಾ ಸಂಘ), ಗುರುಶಾಂತಮ್ಮ (ಅಧ್ಯಕ್ಷರು, ಒಂಟಿ ಮಹಿಳೆಯರ ಸಂರಕ್ಷಣಾ ಸಂಘ), ಭಾಗ್ಯಮ್ಮ, ರೇಣುಕಮ್ಮ, ವಿನೋದ್ ಸೇರಿದಂತೆ ವಿವಿಧ ಸಂಘಟನೆಗಳ ಮುಖಂಡರು ಉಪಸ್ಥಿತರಿದ್ದರು.

ರೈತ ಸಂಘದ ಮುಖಂಡರಾದ ರಮೇಶ್, ರಾಮಣ್ಣ ಹಾಗೂ ಹುಲುಗಪ್ಪ, ಮಸಣ ಕಾರ್ಮಿಕರ ಸಂಘದ ಮುಖಂಡರು ಸೇರಿದಂತೆ ನೂರಾರು ಮಹಿಳೆಯರು ಕಾರ್ಯಕ್ರಮದಲ್ಲಿ ಭಾಗವಹಿಸಿದರು.

> "ಜಾತಿ, ಲಿಂಗ ತಾರತಮ್ಯ ನಿವಾರಣೆಗೆ ಸಮಾಜವೇ ಎಚ್ಚೆತ್ತುಕೊಳ್ಳಬೇಕು; ಸಮಾನತೆಯ ಹಾದಿಯಲ್ಲಿ ನಡೆವುದು ಅವಶ್ಯಕ."
> **– ಪ್ರತಿಭಟನಾಕಾರರು**

# ಎಫ್‌ಐಡಿ ಮೂಲಕ ರೈತರಿಗೆ ಯೂರಿಯಾ ವಿತರಣೆ: ಎನ್. ನಾಗರಾಜ್




■ **ವಿಜಯಸಾಕ್ಷಿ ಸುದ್ದಿ, ಹಗರಿಬೊಮ್ಮನಹಳ್ಳಿ**

ಹಗರಿಬೊಮ್ಮನಹಳ್ಳಿಯಲ್ಲಿ ಎಫ್‌ಐಡಿ ವ್ಯವಸ್ಥೆಯ ಮೂಲಕ ರೈತರಿಗೆ ಯೂರಿಯಾ ಗೊಬ್ಬರವನ್ನು ವಿತರಿಸಲಾಗುವುದು ಎಂದು ಜಂಟಿ ಕೃಷಿ ನಿರ್ದೇಶಕರ ಕಚೇರಿ ಅಧಿಕಾರಿ ಎನ್. ನಾಗರಾಜ್ ತಿಳಿಸಿದ್ದಾರೆ.

ಬುಧವಾರ ಕೃಷಿ ಇಲಾಖೆ ಕಚೇರಿಯಲ್ಲಿ 2026-27ನೇ ಸಾಲಿನ ಮುಂಗಾರು ಹಂಗಾಮಿನ ಅಂಗವಾಗಿ ಬಿತ್ತನೆ ಬೀಜ, ರಸಗೊಬ್ಬರ ಹಾಗೂ ಕೀಟನಾಶಕಗಳ ಲಭ್ಯತೆ ಕುರಿತು ಡೀಲರ್‌ಗಳು ಮತ್ತು ಮಾರಾಟಗಾರರ ಸಭೆ ನಡೆಯಿತು. ಸಭೆಯಲ್ಲಿ ಮಾತನಾಡಿದ ಅವರು, ಬೀಜ ರಸಗೊಬ್ಬರ ಕಾಯ್ದೆಗಳ ಬಗ್ಗೆ ವಿವರಿಸಿ, ರೈತರಿಗೆ ಸಮರ್ಪಕ ಸರಬರಾಜು ವ್ಯವಸ್ಥೆ ಕಲ್ಪಿಸುವುದಾಗಿ ಹೇಳಿದರು.

ತಹಸೀಲ್ದಾರ್ ಆರ್. ಕವಿತಾ ಮಾತನಾಡಿ, ಮುಂಗಾರು ಹಂಗಾಮಿನಲ್ಲಿ ರೈತರಿಗೆ ಬೇಕಾದಷ್ಟು ಬಿತ್ತನೆ ಬೀಜ, ರಸಗೊಬ್ಬರ ಹಾಗೂ ಕೀಟನಾಶಕಗಳು ಕೊರತೆಯಾಗದಂತೆ ಮುನ್ನೆಚ್ಚರಿಕೆ ವಹಿಸಲು ಸೂಚಿಸಿದರು.

ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ಎಸ್.ಬಿ. ಪಾಟೀಲ್ ಮಾತನಾಡಿ, ಪರವಾನಿಗೆ ಇಲ್ಲದೆ ಬಿತ್ತನೆ ಬೀಜ, ರಸಗೊಬ್ಬರ ಹಾಗೂ ಕೀಟನಾಶಕಗಳನ್ನು ಮಾರಾಟ ಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು. ಕಳಪೆ ಬೀಜ ಮಾರಾಟ ಮಾಡುವವರ ಮೇಲೆ ಸಹ ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ತಾ.ಪಂ ಉದ್ಯೋಗ ಖಾತ್ರಿ ಸಹಾಯಕ ನಿರ್ದೇಶಕ ರಮೇಶ್ ಮಹಾಲಿಂಗಪುರ, ತೋಟಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕ ವಿಜಯಕುಮಾರ್ ನಿಚಾಪುರ, ಕೃಷಿ ಇಲಾಖೆಯ ನಾಗಾರ್ಜುನ, ಭೋಜ ನಾಯ್ಕ, ಶಿವಕುಮಾರ್, ಕೃಷಿಕ ಸಮಾಜದ ಕೆ.ಪಿ. ದೇವರಾಜ್, ರೈತ ಸಂಘದ ಬಸವನಗೌಡ, ರೈತರಾದ ಚಂದ್ರಪ್ಪ, ವಿಶ್ವನಾಥ್, ಬಿತ್ತನೆ ಬೀಜ ರಸಗೊಬ್ಬರ ಕೀಟನಾಶಕಗಳ ಮಾರಾಟಗಾರರ ಸಂಘದ ಶ್ರೀನಿವಾಸ್ ಸೇರಿದಂತೆ ವಿತರಕರು, ರೈತರು ಹಾಗೂ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಹೆಸರು ಬದಲಿಸಿದರೆ ಹೊಟ್ಟೆ ತುಂಬಲ್ಲ

▶▶ ಮೊದಲನೇ ಪುಟದಿಂದ

ನಗರದ ಪತ್ರಿಕಾ ಭವನದಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇವಲ ಹೆಸರನ್ನು ಬದಲಾಯಿಸುವುದರಿಂದ ಅತಿಥಿ ಉಪನ್ಯಾಸಕರ ಜೀವನ ಸುಧಾರಿಸುವುದಿಲ್ಲ. ನಮಗೆ ಬೇಕಿರುವುದು ಹೆಸರು ಅಲ್ಲ, ಉದ್ಯೋಗ ಭದ್ರತೆ ಎಂದು ಸ್ಪಷ್ಟಪಡಿಸಿದರು. ಶೈಕ್ಷಣಿಕ ಅರ್ಹತೆ ಇಲ್ಲದ ಹಾಗೂ 5 ವರ್ಷಕ್ಕಿಂತ ಹೆಚ್ಚು ಸೇವಾನುಭವ ಹೊಂದಿರುವ ಉಪನ್ಯಾಸಕರಿಗಾಗಿ ಸರ್ಕಾರ 'ಶೈಕ್ಷಣಿಕ ಸಂಯೋಜಕ' ಎಂಬ ಹೊಸ ಹುದ್ದೆ ಸೃಷ್ಟಿಸಿರುವುದು ಸ್ವಾಗತಾರ್ಹವಾದರೂ, ಅದರಲ್ಲಿನ ಅಸ್ಪಷ್ಟತೆ ಆತಂಕಕಾರಿಯಾಗಿದೆ. ಈ ಹುದ್ದೆಯನ್ನು ಕೇವಲ 3 ವರ್ಷಗಳಿಗೆ ಮಿತಿಗೊಳಿಸಿರುವುದು ಸರಿಯಲ್ಲ. ಇದು ತಾತ್ಕಾಲಿಕ ಪರಿಹಾರ ಮಾತ್ರ ಎಂದು ಟೀಕಿಸಿದರು. ರಾಜ್ಯದ ಪದವಿ ಕಾಲೇಜುಗಳಲ್ಲಿ ಖಾಲಿ ಇರುವ ಸಾವಿರಾರು ಹುದ್ದೆಗಳಿಗೆ ದಶಕಗಳಿಂದ ಸೇವೆ ಸಲ್ಲಿಸುತ್ತಿರುವ ಅತಿಥಿ ಉಪನ್ಯಾಸಕರಿಗೆ ತಕ್ಷಣವೇ ಸೇವಾ ಭದ್ರತೆ ನೀಡಬೇಕು. ಇಲ್ಲವಾದರೆ ರಾಜ್ಯದಾದ್ಯಂತ ಎಲ್ಲಾ ಅತಿಥಿ ಉಪನ್ಯಾಸಕರು ಒಗ್ಗೂಡಿ ಬೃಹತ್ ಹೋರಾಟ ಹಮ್ಮಿಕೊಳ್ಳುವುದು ಅನಿವಾರ್ಯವಾಗಲಿದೆ ಎಂದು ಎಚ್ಚರಿಸಿದರು. ಈ ಸಂದರ್ಭದಲ್ಲಿ ನವೀನ ಮರಿಗೌಡ್ರ, ನೂರಜಹಾನ್, ಪದ್ಮಾ ತಳಕಲ್, ವಿಜಯಕುಮಾರ ದೇಸಾಯಿಗೌಡ್ರ ಉಪಸ್ಥಿತರಿದ್ದರು.

## ಕಟ್ಟಡ ಕಾರ್ಮಿಕರಿಗೆ ಸರ್ಕಾರದ ಯೋಜನೆಗಳು ಶ್ರೀರಕ್ಷೆ

▶▶ ಮೊದಲನೇ ಪುಟದಿಂದ

ವಿದ್ಯಾರ್ಥಿಗಳು ಉನ್ನತ ಗುರಿಗಳನ್ನು ಹೊಂದಬೇಕು ಎಂದು ಕರೆ ನೀಡಿದ ಅವರು, ಉತ್ತಮ ಗುಣಮಟ್ಟದ ಶಿಕ್ಷಣಕ್ಕೆ ಆದ್ಯತೆ ನೀಡಬೇಕು ಎಂದರು.

ಕಾರ್ಯಕ್ರಮದಲ್ಲಿ ಅಭಿನವ ಕೊಟ್ಟೂರು ಮಹಾಸ್ವಾಮಿಗಳು ದಿವ್ಯ ಸಾನಿಧ್ಯ ವಹಿಸಿದ್ದರು. ವಿಧಾನ ಪರಿಷತ್ ಸದಸ್ಯ ಎಸ್.ವಿ. ಸಂಕನೂರು, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಕ್ಬರಸಾಬ್ ಬಬರ್ಚಿ, ಜಿಲ್ಲಾ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಬಿ.ಬಿ. ಅಸೂಟಿ, ತಾಲೂಕು ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಅಶೋಕ ಮಂದಾಲಿ, ಕಟ್ಟಡ ನಿರ್ಮಾಣ ಕಾರ್ಮಿಕರ ಸಂಘದ ಅಧ್ಯಕ್ಷ ಮಹಬೂಬ್ ಖಾನ್ ಪಠಾಣ್, ನಗರಸಭೆ ಅಧ್ಯಕ್ಷ ಉಷಾ ದಾಸರ, ಡಾ. ಗಣೇಶ್ ರಾವ್ ಸೇರಿದಂತೆ ಕಾರ್ಮಿಕ ಸಂಘಟನೆಗಳ ಪದಾಧಿಕಾರಿಗಳು ಹಾಗೂ ಸ್ಥಳೀಯ ಗಣ್ಯರು ಉಪಸ್ಥಿತರಿದ್ದರು.

**30-35 ವರ್ಷಗಳ ಹಳೆಯ ಸ್ನೇಹಿತೆಯರ ಬಳಗದಿಂದ ಪತ್ರಕರ್ತ ದಿಗಂಬರ ಪೂಜಾರ ಹಾಗೂ ಉಪತಹಸೀಲ್ದಾರ ರೇಣುಕಾ**

# ಸ್ವಾರ್ಥರಹಿತ ಬಾಂಧವ್ಯವೇ ನಿಜವಾದ ಸ್ನೇಹ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಸ್ನೇಹ ಎನ್ನುವುದು ಸ್ವಾರ್ಥರಹಿತ ನಂಬಿಕೆ, ಗೌರವ ಹಾಗೂ ಕಷ್ಟ-ಸುಖಗಳಲ್ಲಿ ಜೊತೆ ನಿಲ್ಲುವ ಅಮೂಲ್ಯ ಬಾಂಧವ್ಯವಾಗಿದೆ ಎಂದು ಪಿಎಸ್ಐ ನಾಗರಾಜ ಗಡದ ಹೇಳಿದರು.



ಪಟ್ಟಣದಲ್ಲಿ ಸ್ನೇಹಿತೆಯರ ಬಳಗದಿಂದ ಸೋಮವಾರ ಆಯೋಜಿಸಲಾದ ಸನ್ಮಾನ ಸಮಾರಂಭದಲ್ಲಿ ಪತ್ರಕರ್ತ ದಿಗಂಬರ ಪೂಜಾರ ಮತ್ತು ಉಪ ತಹಸೀಲ್ದಾರ್ ರೇಣುಕಾ ದಾನಣ್ಣವರರನ್ನು ಸನ್ಮಾನಿಸಿ ಅವರು ಮಾತನಾಡಿದರು.

ಗೆಳೆತನವು ಜೀವನಕ್ಕೆ ಬಲ ನೀಡುತ್ತದೆ. ಯಾವುದೇ ನಿರೀಕ್ಷೆಯಿಲ್ಲದೆ ಪ್ರೀತಿ ಹಂಚುವುದು ಹಾಗೂ ಸಂಕಷ್ಟದಲ್ಲಿ ಬೆಂಬಲವಾಗಿ ನಿಲ್ಲುವುದು ಸ್ನೇಹದ ನಿಜವಾದ ಅರ್ಥವಾಗಿದೆ. ಇತ್ತೀಚಿನ ದಿನಗಳಲ್ಲಿ ಸ್ನೇಹದ ಮಹತ್ವವನ್ನು ಅರಿಯದವರ ಸಂಖ್ಯೆ ಹೆಚ್ಚುತ್ತಿರುವ ಸಂದರ್ಭದಲ್ಲಿ, ಸುಮಾರು 30-35 ವರ್ಷಗಳ ಹಿಂದೆ ಒಟ್ಟಿಗೆ ವಿದ್ಯಾಭ್ಯಾಸ ಮಾಡಿದ ಸ್ನೇಹಿತೆಯರು ಮತ್ತೆ ಸೇರಿ ತಮ್ಮ ಸ್ನೇಹಿತನ ಸಾಧನೆಯನ್ನು ಗೌರವಿಸಿರುವುದು ನಿಜಕ್ಕೂ ಮಾದರಿಯ ಕಾರ್ಯವಾಗಿದೆ ಎಂದು ಹೇಳಿದರು. ರಾಜ್ಯ ಮಟ್ಟದ ಪ್ರಶಸ್ತಿಗಳಿಗೆ ಭಾಜನರಾಗಿರುವ ದಿಗಂಬರ ಪೂಜಾರ ಅವರನ್ನು ಗೌರವಿಸಿರುವುದು ಶ್ಲಾಘನೀಯ ಎಂದರು.

ಇನ್ನೋರ್ವ ಅತಿಥಿ, ಕಸಾಪ ತಾಲೂಕು ಅಧ್ಯಕ್ಷ ಈಶ್ವರ ಮೆಡ್ಲೇರಿ ಮಾತನಾಡಿ, ಶಾಲಾ ಹಂತದಲ್ಲಿ ಮಕ್ಕಳು ಡಾಕ್ಟರ್, ಇಂಜಿನಿಯರ್, ಪೋಲಿಸ್ ಆಗಬೇಕೆಂದು ಕನಸು ಕಾಣುತ್ತಾರೆ. ಆದರೆ ಜೀವನದಲ್ಲಿ ದೊಡ್ಡ ಹುದ್ದೆಗಳನ್ನು ಹೊಂದಿದವರನ್ನು ಕೇಳಿದರೆ, ಮತ್ತೆ ಬಾಲ್ಯಕ್ಕೆ ಹಿಂತಿರುಗಬೇಕೆಂದು ಹೇಳುತ್ತಾರೆ. ಇದು ಸ್ನೇಹದ ಮೌಲ್ಯವನ್ನು ತೋರಿಸುತ್ತದೆ. ಒಳ್ಳೆಯ ಸ್ನೇಹಿತರಿದ್ದರೆ ಯಾವುದೇ ಕಷ್ಟವನ್ನೂ ಸುಲಭವಾಗಿ ಎದುರಿಸಬಹುದು. ತಮ್ಮದೇ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸ್ನೇಹಿತನಿಗೆ ಬೆಂಬಲ ನೀಡಿ ಗೌರವಿಸಿರುವುದು ಹೆಮ್ಮೆಯ ಸಂಗತಿಯಾಗಿದೆ. ಈ ಕಾರ್ಯಕ್ರಮ ಸಮಾಜಕ್ಕೆ ಒಳ್ಳೆಯ ಸಂದೇಶ ನೀಡುತ್ತದೆ ಎಂದರು.

ಸಭೆಗೆ ಬಳಗದ ಸದಸ್ಯೆ ಜಯಲಕ್ಷ್ಮಿ ಮಹಾಂತಶೆಟ್ಟರ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ಪತ್ರಕರ್ತ ದಿಗಂಬರ ಪೂಜಾರ ಹಾಗೂ ಉಪ ತಹಸೀಲ್ದಾರ್ ರೇಣುಕಾ ದಾನಣ್ಣವರರನ್ನು ಸನ್ಮಾನಿಸಲಾಯಿತು.

> "ಗೆಳೆತನವು ಜೀವನಕ್ಕೆ ಬಲ ನೀಡುವ ಶಕ್ತಿಯಾಗಿದ್ದು, ಯಾವುದೇ ನಿರೀಕ್ಷೆಯಿಲ್ಲದೆ ಕಷ್ಟ-ಸುಖಗಳಲ್ಲಿ ಜೊತೆಯಾಗಿರುವುದು ಅದರ ನಿಜವಾದ ಮಹತ್ವ."
> – ನಾಗರಾಜ ಗಡದ, ಪಿಎಸ್ಐ

ಕಾರ್ಯಕ್ರಮದಲ್ಲಿ ರತ್ನ ಕರ್ಕಿ, ಸುಮಿತ್ರಾ ಉಮಚಗಿ, ಉಮಾ ಮಲ್ಲಾಡದ, ಉಮೇರಾಬಾನು ಶಿರಹಟ್ಟಿ, ಗಿರಿಜಾ ಜಗಲಿ, ಮೀನಾಕ್ಷಿ ಕಳಸೂರ, ರಾಜೇಶ್ವರಿ ಕೋಲಕಾರ, ರೇಖಾ ಘೋರ್ಪಡೆ, ಚಂದ್ರಕಲಾ ವರ್ಣೇಕರ್, ಅನಿತಾ ಮಾಗಳದ, ಪಾರ್ವತಿ ಅರಳಿ, ಪ್ರಭಾ ಶಿರೋಳ, ಸುಜಾತಾ ಹಿರೇಮಠ, ಗೌರಾ ಹಳ್ಳಿಕೇರಿ, ಪ್ರಭಾ ಕೂಡ್ಲಮಠ, ಶಕುಂತಲಾ ಕೊಟಗಿ, ಶಕುಂತಲಾ ಉಪಾಸಿ, ಯಶೋದಾ ಉಪಾಧ್ಯೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

**ಹಗರಿಬೊಮ್ಮನಹಳ್ಳಿಯಲ್ಲಿ ಹಮಾಲರ ಸಂಘದಿಂದ ಕಾರ್ಮಿಕ ದಿನಾಚರಣೆ; ಮೂಲಭೂತ ಸೌಲಭ್ಯಗಳಿಗೆ ಸರ್ಕಾರಕ್ಕೆ ಮನವಿ**

# ಕಾರ್ಮಿಕರ ಶ್ರಮವೇ ದೇಶದ ಬೆಳವಣಿಗೆಗೆ ಆಧಾರ



■ ವಿಜಯಸಾಕ್ಷಿ ಸುದ್ದಿ, ಹಗರಿಬೊಮ್ಮನಹಳ್ಳಿ

ಪಟ್ಟಣದ ಶ್ರೀ ಮಾರುತೇಶ್ವರ ಎಪಿಎಂಸಿ ಹಮಾಲರ ಸಂಘದ ವತಿಯಿಂದ ಕಾರ್ಮಿಕ ದಿನಾಚರಣೆಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಹಮಾಲರ ಸಂಘದ ಅಧ್ಯಕ್ಷ ನಾಗಪ್ಪ ಮೋರಗೇರಿ, ದೇಶದ ಅಭಿವೃದ್ಧಿಯಲ್ಲಿ ಕಾರ್ಮಿಕರ ಪಾತ್ರ ಅಪಾರವಾಗಿದ್ದು, ಅವರ ಶ್ರಮದಿಂದಲೇ ಸಮಾಜ ಮುನ್ನಡೆಯುತ್ತಿದೆ ಎಂದು ಹೇಳಿದರು. ಕಾರ್ಮಿಕರ ಹಕ್ಕುಗಳು ಹಾಗೂ ಕಲ್ಯಾಣಕ್ಕಾಗಿ ಸಂಘಟನೆಗಳು ಬಲವಾಗಿ ನಿಲ್ಲಬೇಕು ಎಂದು ಅಭಿಪ್ರಾಯಪಟ್ಟರು.

ಹಮಾಲರು ದಿನನಿತ್ಯ ಕಠಿಣ ಶ್ರಮ ವಹಿಸುತ್ತಿದ್ದರೂ, ಅವರಿಗೆ ಸಮರ್ಪಕ ಸೌಲಭ್ಯಗಳು ಲಭ್ಯವಾಗುತ್ತಿಲ್ಲ ಎಂದು ಅವರು ವಿಷಾದ ವ್ಯಕ್ತಪಡಿಸಿದರು. ವಿಶೇಷವಾಗಿ ಸಮರ್ಪಕ ವೇತನ, ಆರೋಗ್ಯ ಸೌಲಭ್ಯಗಳು, ವಿಶ್ರಾಂತಿ ಕೊಠಡಿಗಳು ಮತ್ತು ಕುಡಿಯುವ ನೀರಿನ ಸಮಸ್ಯೆ ಹಮಾಲರನ್ನು ಕಂಗೆಡಿಸುತ್ತಿದೆ ಎಂದು ಹೇಳಿದರು. ಎಪಿಎಂಸಿಯಲ್ಲಿ ರಾಗಿ ತೂಕ ಮಾಡುವ ಹಮಾಲರು ಸೇರಿದಂತೆ ಅನೇಕರು ಮೂಲಭೂತ ಸೌಲಭ್ಯಗಳ ಕೊರತೆಯಿಂದ ಸಂಕಷ್ಟ ಅನುಭವಿಸುತ್ತಿದ್ದಾರೆ ಎಂದು ತಿಳಿಸಿದರು.

> "ಎಪಿಎಂಸಿ ಆವರಣದಲ್ಲಿ ಕುಡಿಯುವ ನೀರು ಮತ್ತು ವಿಶ್ರಾಂತಿ ಗೃಹ ವ್ಯವಸ್ಥೆ ಕಲ್ಪಿಸಲಾಗಿದೆ; ಹೆಚ್ಚುತ್ತಿರುವ ಹಮಾಲರ ಸಂಖ್ಯೆಗೆ ಅನುಗುಣವಾಗಿ ಇನ್ನಷ್ಟು ಸೌಲಭ್ಯಗಳನ್ನು ಸರ್ಕಾರದ ಮೂಲಕ ಒದಗಿಸಲಾಗುವುದು."
> – **ಎನ್. ಶೈಲಾ,** ಎಪಿಎಂಸಿ ಕಾರ್ಯದರ್ಶಿ, ಹಗರಿಬೊಮ್ಮನಹಳ್ಳಿ

ಉಪಾಧ್ಯಕ್ಷ ಸಣ್ಣ ಹುಚ್ಚಪ್ಪ ರಾಜಣ್ಣನವರ್ ಮಾತನಾಡಿ, ಮಳೆಗಾಲ ಹಾಗೂ ಬೇಸಿಗೆಯಲ್ಲಿ ಕೆಲಸ ಮಾಡುವ ವೇಳೆ ಅಗತ್ಯ ಮೂಲಸೌಕರ್ಯಗಳ ಕೊರತೆಯಿಂದ ಹಮಾಲರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ. ಸರ್ಕಾರ ಮತ್ತು ಸಂಬಂಧಿತ ಅಧಿಕಾರಿಗಳು ಹಮಾಲರ ಸಮಸ್ಯೆಗಳ ಕಡೆ ಗಮನಹರಿಸಿ ಶೀಘ್ರ ಪರಿಹಾರ ಒದಗಿಸಬೇಕು ಎಂದು ಆಗ್ರಹಿಸಿದರು.

ಪ್ರಧಾನ ಕಾರ್ಯದರ್ಶಿ ಮಂಜುನಾಥ್ ಬಲಹುಣಿಸಿ ಮಾತನಾಡಿ, ಹಮಾಲರ ಕಲ್ಯಾಣಕ್ಕಾಗಿ ಸಂಘ ಸದಾ ಹೋರಾಟ ನಡೆಸುತ್ತಿದ್ದು, ಮುಂದಿನ ದಿನಗಳಲ್ಲಿ ಹಕ್ಕುಗಳನ್ನು ಕಾಯ್ದುಕೊಳ್ಳಲು ಇನ್ನಷ್ಟು ಬಲವಾಗಿ ಕಾರ್ಯನಿರ್ವಹಿಸಲಾಗುವುದು ಎಂದರು.

ಕಾರ್ಯಕ್ರಮದ ಅಂಗವಾಗಿ ಬೆಳಗ್ಗಿನಿಂದಲೇ ಎಪಿಎಂಸಿ ಶ್ರೀ ಆಂಜನೇಯ ದೇವಸ್ಥಾನದಲ್ಲಿ ಪೂಜೆ-ಪುನಸ್ಕಾರ ನೆರವೇರಿಸಿ, ಹಮಾಲರ ಸಂಘದ ವತಿಯಿಂದ ಪ್ರಸಾದ ವಿತರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಗೌರವಾಧ್ಯಕ್ಷ ದಾದಮ್ಮನವರ ಮರಿ ಹುಲಗಪ್ಪ, ಖಜಾಂಜಿ ರಂಗಮ್ಮನವರ ಪರಸಪ್ಪ, ಹೆಚ್. ಜಮಾಲ್ ಸಾಬ್, ಅಂಬಾಡಿ ಗೋಣಿಬಸಪ್ಪ, ಸರ್ದಾರ್ ಸಿದ್ದಪ್ಪ, ಉಪ್ಪಾರ್ ಅಂಜಿನಪ್ಪ, ಹನುಮಂತಪ್ಪ ದೇವಲಾಪುರ, ದಾದಮ್ಮನವರ ಹೇಮಪ್ಪ, ವಿರುಪಾಕ್ಷಿ ಸೇರಿದಂತೆ ಪಟ್ಟಣ ಹಾಗೂ ಗ್ರಾಮೀಣ ಭಾಗದ ನೂರಕ್ಕೂ ಹೆಚ್ಚು ಹಮಾಲರು ಉಪಸ್ಥಿತರಿದ್ದರು.

**ಅಂಬಾಭವಾನಿ ದೇವಸ್ಥಾನ ಕಳಸಾರೋಹಣ, ಮೂರ್ತಿ ಪ್ರತಿಷ್ಠಾಪನೆ ಹಾಗೂ ಸಹಸ್ರಾರ್ಜುನ ಸಮುದಾಯ ಭವನ ಲೋಕಾರ್ಪಣೆ ಸಮಾರಂಭದಲ್ಲಿ ಗವಿಸಿದ್ದೇಶ್ವರ ಮಹಾಸ್ವಾಮಿಗಳು**

# ಸಮಾಜಮುಖಿ ಜೀವನವೇ ಮಾನವ ಜನ್ಮದ ಸಾರ್ಥಕತೆ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಮನುಷ್ಯ ತನ್ನ ಜೀವನದಲ್ಲಿ ಸಮಾಜಕ್ಕಾಗಿ ಮಾಡುವ ತ್ಯಾಗ, ಸೇವೆ ಹಾಗೂ ಸಹಾಯ-ಸಹಕಾರದಿಂದ ಜೀವಿತಾವಧಿಯ ಬಳಿಕವೂ ಸ್ಮರಿಸಲ್ಪಟ್ಟರೆ ಅದೇ ಮಾನವ ಜನ್ಮದ ಸಾರ್ಥಕತೆ ಎಂದು ಕೊಪ್ಪಳ ಗವಿಮಠದ ಅಭಿನವ ಶ್ರೀ ಗವಿಸಿದ್ದೇಶ್ವರ ಮಹಾಸ್ವಾಮಿಗಳು ಹೇಳಿದರು.



ಪಟ್ಟಣದ ಅಂಬಾಭವಾನಿ ದೇವಸ್ಥಾನದ ಕಳಸಾರೋಹಣ, ಮೂರ್ತಿಗಳ ಪ್ರತಿಷ್ಠಾಪನೆ ಹಾಗೂ ಶ್ರೀ ಸಹಸ್ರಾರ್ಜುನ ಸಮುದಾಯ ಭವನ ಲೋಕಾರ್ಪಣೆ ಸಮಾರಂಭದಲ್ಲಿ ದಿವ್ಯಸಾನಿಧ್ಯ ವಹಿಸಿ ಆಶೀರ್ವಚನ ನೀಡಿದ ಅವರು, ಬದುಕಿನ ಅಂತ್ಯ ಅರಿತಾಗ ಬದುಕಿನ ಮಹತ್ವ ತಿಳಿಯುತ್ತದೆ. ಮನುಷ್ಯ ತನ್ನ ಬದುಕನ್ನು ಅರ್ಥಮಾಡಿಕೊಂಡು ಬದುಕಬೇಕು. ಕೇವಲ ಸ್ವಾರ್ಥಕ್ಕಾಗಿ ಬದುಕದೇ ಸಮಾಜಮುಖಿಯಾಗಿ ಬದುಕಿದರೆ ಯೋಗಿಯೂ ಆಗಬಹುದು ಎಂದರು.

ಚಿನ್ನಕ್ಕಿಂತ ಅನ್ನದ ಬೆಲೆ ಹೆಚ್ಚು, ಆದರೆ ಮನುಷ್ಯನಿಗೆ ಹಸಿವಿನ ಬೆಲೆ ಇನ್ನಷ್ಟು ಹೆಚ್ಚಿನದು ಎಂಬ ಸತ್ಯವನ್ನು ಅರಿತುಕೊಳ್ಳಬೇಕು. ಮಕ್ಕಳಿಗೆ ಶಿಕ್ಷಣದ ಜೊತೆಗೆ ಸಂಸ್ಕಾರ ಹಾಗೂ ಧಾರ್ಮಿಕ ಮೌಲ್ಯಗಳನ್ನು ಬೆಳೆಸುವಲ್ಲಿ ಪಾಲಕರು ಗಮನ ಹರಿಸಬೇಕು ಎಂದು ತಿಳಿಸಿದರು.

ಜನಸಂಖ್ಯೆಯಲ್ಲಿ ಕಡಿಮೆಯಿದ್ದರೂ ಒಗ್ಗಟ್ಟಿನ ಬಲ ಹಾಗೂ ಅಂಬಾಭವಾನಿಯ ಮೇಲಿನ ಭಕ್ತಿಯಿಂದ ಎಸ್‌ಎಸ್‌ಕೆ ಸಮಾಜದವರು ಸುಂದರವಾದ ದೇವಸ್ಥಾನ ಮತ್ತು ಸಮುದಾಯ ಭವನ ನಿರ್ಮಿಸಿ ಲೋಕಾರ್ಪಣೆಗೊಳಿಸಿರುವುದು ಶ್ಲಾಘನೀಯ ಕಾರ್ಯವಾಗಿದ್ದು, ಇತರ ಸಮಾಜಗಳಿಗೆ ಪ್ರೇರಣೆಯಾಗಿದೆ ಎಂದರು.

> "ಸ್ವಾರ್ಥವನ್ನು ಮೀರಿ ಸಮಾಜಕ್ಕಾಗಿ ಸೇವೆ ಮಾಡಿದಾಗಲೇ ಮಾನವ ಜನ್ಮ ಸಾರ್ಥಕವಾಗುತ್ತದೆ."
> – ಅಭಿನವ ಶ್ರೀ ಗವಿಸಿದ್ದೇಶ್ವರ ಮಹಾಸ್ವಾಮಿಗಳು

ಶಾಸಕ ಡಾ. ಚಂದ್ರು ಲಮಾಣಿ ಮಾತನಾಡಿ, ಲಕ್ಷ್ಮೇಶ್ವರದಲ್ಲಿ ಎಸ್‌ಎಸ್‌ಕೆ ಸಮಾಜದವರು ಒಗ್ಗಟ್ಟಿನಿಂದ ಕೈಗೊಳ್ಳುತ್ತಿರುವ ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಗಳು ಮಾದರಿಯಾಗಿವೆ ಎಂದರು. ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ವೇದಿಕೆ ಉದ್ಘಾಟಿಸಿದರು. ಎಸ್‌ಎಸ್‌ಕೆ ಸಮಾಜದ ರಾಜ್ಯಾಧ್ಯಕ್ಷ ಡಾ. ಶಶಿಕುಮಾರ ಮೆಹರವಾಡೆ ನೂತನ ಗಣಪತಿ ದೇವಸ್ಥಾನ ಉದ್ಘಾಟಿಸಿದರು.

ಕಾರ್ಯಕ್ರಮದಲ್ಲಿ ಎಸ್‌ಎಸ್‌ಕೆ ಸಮಾಜ ಸೇವಾ ಸಮಿತಿ ಅಧ್ಯಕ್ಷ ಪರಶುರಾಮ ಬದಿ ಅಧ್ಯಕ್ಷತೆ ವಹಿಸಿದ್ದರು. ಮಾಜಿ ಶಾಸಕರಾದ ಜಿ.ಎಸ್. ಗಡ್ಡದೇವರಮಠ, ಜಿ.ಎಂ. ಮಹಾಂತಶೆಟ್ಟರ, ಅಶೋಕ ಕಾಟವೆ, ಎಂಜಿಎಮ್ ಫೌಂಡೇಶನ್ ಅಧ್ಯಕ್ಷ ಮಹಾಂತೇಶ ಮಹಾಂತಶೆಟ್ಟರ, ಪುಲಿಕೇಶ ಉಪನಾಳ, ರಾಮಚಂದ್ರಸಾ ಕಬಾಡಿ, ಟಿ.ಎಂ. ಮೆಹರವಾಡೆ, ಸತೀಶ ಮೆಹರವಾಡೆ, ನಾಗೇಶ ಕಲಬುರ್ಗಿ, ನೀಲಕಂಠಸಾ ಜಡಿ, ಕಾಶೀನಾಥಸಾ ಛಾಟ್ನಿ, ಮಂಜುನಾಥ ಕಬಾಡಿ, ಫಕ್ಕೀರಸಾಬ ಭಾಂಡಗೆ, ಶ್ರೀಕಾಂತಸಾ ಕಟವಟೆ, ಪ್ರಕಾಶ ಬಾಕಳೆ, ಭಾಸ್ಕರಸಾ ಜಿತೂರಿ, ಲಕ್ಷ್ಮಣಸಾ ರಾಜೋಳಿ, ಇಂದುಬಾಯಿ ಬದಿ, ಶಾಂತಾಬಾಯಿ ಪವಾರ, ಭರತ ಬಾಕಳೆ ಸೇರಿದಂತೆ ಸೋಮವಂಶ ಸಹಸ್ರಾರ್ಜುನ ಕ್ಷತ್ರಿಯ ಸಮಾಜ ಪಂಚ ಟ್ರಸ್ಟ್ ಸಮಿತಿ, ಅಂಬಾಭವಾನಿ ದೇವಸ್ಥಾನ ವಿವಿಧೋದ್ದೇಶ ಸೇವಾ ಸಮಿತಿ, ಎಸ್‌ಎಸ್‌ಕೆ ಮಹಿಳಾ ಮಂಡಳಿ ಹಾಗೂ ತರುಣ ಸಂಘದ ಪದಾಧಿಕಾರಿಗಳು ಮತ್ತು ಸಮಾಜದ ಹಿರಿಯರು ಉಪಸ್ಥಿತರಿದ್ದರು. ಸಾಹಿತಿ ಈಶ್ವರ ಮೆಡ್ಲೇರಿ ಕಾರ್ಯಕ್ರಮ ನಿರೂಪಿಸಿದರು.

ಕಾರ್ಯಕ್ರಮದ ಅಂಗವಾಗಿ ದೇವಸ್ಥಾನದಲ್ಲಿ ದಿನಪೂರ್ತಿ ವಿಶೇಷ ಪೂಜೆ, ಅಲಂಕಾರ ಹಾಗೂ ಪ್ರಸಾದ ಸೇವೆ ನೆರವೇರಿತು.

**ಲಕ್ಷ್ಮೇಶ್ವರದಲ್ಲಿ ಕಾರ್ಯಾಗಾರ; ಅನಕ್ಷರಸ್ಥರಿಗೆ ಅಕ್ಷರಜ್ಞಾನ ನೀಡಲು ಬೋಧಕರಿಗೆ ಜವಾಬ್ದಾರಿ**

# ಅನಕ್ಷರತೆ ನಿರ್ಮೂಲನೆಗೆ ಸ್ವಯಂ ಸೇವಕ ಬೋಧಕರಿಗೆ ತರಬೇತಿ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಜಿಲ್ಲಾ ಲೋಕ ಶಿಕ್ಷಣ ಸಮಿತಿ ಗದಗ, ಶಾಲಾ ಶಿಕ್ಷಣ ಇಲಾಖೆ, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಗದಗ ಹಾಗೂ ಜಿಲ್ಲಾ ವಯಸ್ಕರ ಶಿಕ್ಷಣ ಇಲಾಖೆ ಗದಗ ಸಹಯೋಗದಲ್ಲಿ ತಾಲ್ಲೂಕು ಪಂಚಾಯಿತಿಯೊಂದಿಗೆ ಪಟ್ಟಣದ ಪಿಎಂಶ್ರೀ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ನಂ.4ರಲ್ಲಿ ನವ ಭಾರತ ಸಾಕ್ಷರತಾ ಕಾರ್ಯಕ್ರಮದಡಿ ಸ್ವಯಂಸೇವಕ ಬೋಧಕರ ತರಬೇತಿ ಕಾರ್ಯಾಗಾರ ಜರುಗಿತು.



ಕಾರ್ಯಾಗಾರವನ್ನು ಉದ್ಘಾಟಿಸಿದ ಬಿಇಒ ಎಚ್. ಎನ್. ನಾಯ್ಕ ಮಾತನಾಡಿ, ಅನಕ್ಷರಸ್ಥ ಕಲಿಕಾರ್ಥಿಗಳ ಓದು, ಬರಹ, ಲೆಕ್ಕಾಚಾರ, ಅರಿವು ಮತ್ತು ಕ್ರಿಯಾಶೀಲತೆಯನ್ನು ಅಭಿವೃದ್ಧಿಪಡಿಸಲು "ಬಾಳಿಗೆ ಬೆಳಕು" ಪುಸ್ತಕವನ್ನು ಸಿದ್ಧಪಡಿಸಲಾಗಿದೆ. ಈ ಆಧಾರದ ಮೇಲೆ ಅನುಷ್ಠಾನಾಧಿಕಾರಿಗಳು ಮತ್ತು ಬೋಧಕರಿಗೆ ಪರಿಣಿತ ತಂಡದ ಮೂಲಕ ತರಬೇತಿ ನೀಡಲಾಗುತ್ತಿದೆ ಎಂದರು.

ಕ್ಷೇತ್ರ ಸಂಪನ್ಮೂಲ ವ್ಯಕ್ತಿ ಬಸವರಾಜ ಯರಗುಪ್ಪಿ ಮಾತನಾಡಿ, ವಿದ್ಯಾವಂತ ಸಮುದಾಯವು ಕಲಿಯದವರಿಗೆ ಅಕ್ಷರಜ್ಞಾನ ನೀಡುವ ಹೊಣೆ ಹೊತ್ತಿದ್ದು, ಪ್ರತಿ ಸ್ವಯಂಸೇವಕ ಬೋಧಕರು ತಮ್ಮ ವ್ಯಾಪ್ತಿಯಲ್ಲಿ ಗುರುತಿಸಿರುವ ಕನಿಷ್ಠ 20 ಅನಕ್ಷರಸ್ಥರಿಗೆ ಓದು-ಬರಹ ಕಲಿಸಲು ಮುಂದಾಗಬೇಕು ಎಂದು ಹೇಳಿದರು.

> "ಪ್ರತಿ ಬೋಧಕರೂ ತಮ್ಮ ವ್ಯಾಪ್ತಿಯಲ್ಲಿ ಕನಿಷ್ಠ 20 ಅನಕ್ಷರಸ್ಥರಿಗೆ ಅಕ್ಷರಜ್ಞಾನ ನೀಡಬೇಕು."
> – ಬಸವರಾಜ ಯರಗುಪ್ಪಿ

ಲಕ್ಷ್ಮೇಶ್ವರ ಉತ್ತರ ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿ ಉಮೇಶ ನೇಕಾರ ಪ್ರಾಸ್ತಾವಿಕವಾಗಿ ಮಾತನಾಡಿದರು. ಕ್ಷೇತ್ರ ಸಮನ್ವಯಾಧಿಕಾರಿ ಬಿ.ಎಸ್. ಭಜಂತ್ರಿ, ಮುಖ್ಯ ಶಿಕ್ಷಕರಾದ ಬಿ.ಎಂ. ಕುಂಬಾರ, ಕೆ.ಡಿ. ಕಗ್ಗಲಗೌಡರ, ಕೆ.ಬಿ. ಗೊಜನೂರ, ಎಸ್.ಸಿ. ಹುಲಿಕಂತಿಮಠ, ಎಸ್. ಕೆ. ಚಾಂದಖಾನವರ, ಎನ್.ಪಿ. ಪ್ಯಾಟಿಗೌಡರ, ಎನ್.ಎ. ಮುಲ್ಲಾ, ಶ್ರೀನಿವಾಸ ಮತ್ತೂರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

**ಶಂಕರ ಜಯಂತಿ ಅಂಗವಾಗಿ ಸಂಗೀತ ಪ್ರತಿಭಾ ಪುರಸ್ಕಾರ; ಎಸ್‌ಎಸ್‌ಎಲ್‌ಸಿ ಟಾಪರ್ ವಿದ್ಯಾರ್ಥಿಗಳಿಗೆ ಸನ್ಮಾನ**

# ಶಂಕರಾಚಾರ್ಯರ ತತ್ವಗಳು ಸಮಾಜಕ್ಕೆ ದಾರಿದೀಪ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಶಂಕರಾಚಾರ್ಯರು ಭಾರತೀಯ ತತ್ವಶಾಸ್ತ್ರದ ಶ್ರೇಷ್ಠರಲ್ಲಿ ಅಗ್ರಗಣ್ಯರಾಗಿದ್ದು, ಹಿಂದೂ ಧರ್ಮದ ಪುನರುತ್ಥಾನಕ್ಕೆ ಅವರ ಕೊಡುಗೆ ಅಪಾರವಾಗಿದೆ ಎಂದು ಬ್ರಹ್ಮವೃಂದದ ಅಧ್ಯಕ್ಷ ಗೋಪಾಲ ಪಡ್ನೀಸ್ ಹೇಳಿದರು.



ಪಟ್ಟಣದ ಶ್ರೀ ಶಂಕರ ಭಾರತಿಮಠದಲ್ಲಿ ಬ್ರಹ್ಮವೃಂದ ಹಾಗೂ ಶ್ರೀ ಶಂಕರ ಸೇವಾ ಸಮಿತಿ ಆಶ್ರಯದಲ್ಲಿ ಶಂಕರಾಚಾರ್ಯರ ಜಯಂತಿ ಅಂಗವಾಗಿ ಹಮ್ಮಿಕೊಳ್ಳಲಾದ ಸಂಗೀತ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸಿದ ಸಮಾಜದ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಅವರು ಮಾತನಾಡಿದರು.

ಶಂಕರಾಚಾರ್ಯರು ಜಗತ್ತಿನ ಎಲ್ಲರನ್ನು ಒಂದಾಗಿ ಕೊಂಡೊಯ್ಯುವ "ಎಲ್ಲರೂ ಒಂದೇ" ಎಂಬ ಭಾವನೆಯನ್ನು ಸಮಾಜದಲ್ಲಿ ಬಿತ್ತಿದ ಮಹಾನ್ ಚಿಂತಕರಾಗಿದ್ದಾರೆ. ತಮ್ಮ ಆಳವಾದ ಅಧ್ಯಯನದಿಂದ ಚಿಕ್ಕ ವಯಸ್ಸಿನಲ್ಲಿಯೇ ಅಪಾರ ಜ್ಞಾನವನ್ನು ಸಂಪಾದಿಸಿದ್ದ ಅವರ ತಾತ್ವಿಕ ಕೊಡುಗೆಗಳು ಜಗತ್ತಿನ ಮೇಲೆ ಶಾಶ್ವತ ಪ್ರಭಾವ ಬೀರಿವೆ ಎಂದರು.

ವಿದ್ಯಾರ್ಥಿಗಳು ಹೆಚ್ಚು ಅಂಕಗಳನ್ನು ಗಳಿಸಿ ಸಾಧನೆ ಮಾಡುತ್ತಿರುವುದು ಸಂತಸದ ವಿಷಯ. ಆದರೆ ಕಡಿಮೆ ಅಂಕ ಗಳಿಸಿದ ಮಕ್ಕಳಿಗೂ ಉತ್ತೇಜನ ನೀಡುವ ಮೂಲಕ ಮುಂದಿನ ದಿನಗಳಲ್ಲಿ ಸಾಧನೆ ಮಾಡಲು ಪ್ರೋತ್ಸಾಹಿಸಬೇಕು ಎಂದು ಕರೆ ನೀಡಿದರು.

ತಾಲೂಕು ಬ್ರಾಹ್ಮಣ ಸಮಾಜದ ಅಧ್ಯಕ್ಷ ಕೃಷ್ಣ ಕುಲಕರ್ಣಿ ಮಾತನಾಡಿ, ಸನಾತನ ಹಿಂದೂ ಧರ್ಮ ಇಂದು ಇಷ್ಟು ಬಲವಾಗಿ ನಿಲ್ಲಲು ಶಂಕರಾಚಾರ್ಯರ ಕೊಡುಗೆ ಪ್ರಮುಖವಾಗಿದೆ ಎಂದರು. ವಿದ್ಯಾರ್ಥಿಗಳು ಶೈಕ್ಷಣಿಕ ಪ್ರಗತಿಯ ಜೊತೆಗೆ ಸಮಾಜದ ಸಂಪ್ರದಾಯಗಳನ್ನು ಪಾಲಿಸಿಕೊಂಡು ಹೋಗುವಂತೆ ಪಾಲಕರು ಮಾರ್ಗದರ್ಶನ ನೀಡಬೇಕು. ಸಮಾಜಕ್ಕೆ ಒಳ್ಳೆಯ ಕೊಡುಗೆ ನೀಡುವ ಮನೋಭಾವ ಬೆಳೆಸಿಕೊಳ್ಳುವುದು ಅವಶ್ಯಕ ಎಂದು ಹೇಳಿದರು. ಬ್ರಾಹ್ಮಣ ಸಮಾಜ ತನ್ನದೇ ಆದ ಸ್ಥಾನಮಾನವನ್ನು ಕಾಯ್ದುಕೊಂಡು ಬರುತ್ತಿದ್ದು, ಅದನ್ನು ಮತ್ತಷ್ಟು ಬಲಪಡಿಸುವುದು ಎಲ್ಲರ ಜವಾಬ್ದಾರಿ ಎಂದರು.


ಈ ಸಂದರ್ಭದಲ್ಲಿ ಸಮಾಜದ ವತಿಯಿಂದ ಪಂ. ಚಿದಂಬರ ಜೋಶಿ ಅವರಿಗೆ "ವಿಪ್ರ ಕಲಾಶ್ರೀ" ಪ್ರಶಸ್ತಿ ನೀಡಿ ಗೌರವಿಸಲಾಯಿತು. ದಿಲೀಪ ಜೋಶಿ ದಂಪತಿ ಹಾಗೂ ಶಹನಾಯಿ ವಾದಕ ಕೃಷ್ಣಾಜಿ ಕ್ಷತ್ರೀಯ ದಂಪತಿಗಳನ್ನು ಸನ್ಮಾನಿಸಲಾಯಿತು.


> "ಶಂಕರಾಚಾರ್ಯರ 'ಎಲ್ಲರೂ ಒಂದೇ' ಎಂಬ ತತ್ವವು ಸಮಾಜವನ್ನು ಏಕತೆಯ ದಾರಿಗೆ ಕೊಂಡೊಯ್ಯುತ್ತದೆ."
> – ಗೋಪಾಲ ಪಡ್ನೀಸ್

ಕಾರ್ಯಕ್ರಮದಲ್ಲಿ ಗುರುರಾಜ ಪಾಟೀಲ ಕುಲಕರ್ಣಿ, ಅರವಿಂದ ದೇಶಪಾಂಡೆ, ಧ್ರುವರಾಜ ಬೆಟಗೇರಿ, ಡಾ. ಪ್ರಸನ್ನ ಕುಲಕರ್ಣಿ, ನಾರಾಯಣ ಭಟ್ ಪುರಾಣಿಕ, ರಾಜಾಚಾರ್ಯ ರಾಯಚೂರು, ಎ.ಪಿ. ಕುಲಕರ್ಣಿ, ಕೃಷ್ಣಕುಮಾರ ಕುಲಕರ್ಣಿ, ಧೀ-ರೇಂದ್ರಾಚಾರ್ಯ ರಾಯಚೂರು, ಶ್ರೀಕಾಂತ ಪೂಜಾರ, ದಿಗಂಬರ ಪೂಜಾರ, ನಾಗರಾಜ ಪೂಜಾರ, ಚಿಕ್ಕರಸ ಪೂಜಾರ, ವಿಕ್ರಮ ಶಿರೋಳ, ಅನಿಲ್ ಕುಲಕರ್ಣಿ, ರಾಘವೇಂದ್ರ ಪೂಜಾರ, ರಾಜು ಹುಲಮನಿ, ಅನಂತಭಟ್ ಪೂಜಾರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ADVERTORIAL


ಹಾಲಗುಂಡಿ ಬಸವೇಶ್ವರ ದೇವಸ್ಥಾನ


ಚಂದ್ರಮೌಳೇಶ್ವರ ದೇವಸ್ಥಾನ


ಮಲ್ಲಿಕಾರ್ಜುನ ದೇವಾಲಯ


ಕನ್ನೇರಭಾವಿ


ವಿರುಪಾಕ್ಷೇಶ್ವರ ದೇವಸ್ಥಾನ


ಕಲ್ಮಠ

# ಲಕ್ಕುಂಡಿಯ ಐತಿಹಾಸಿಕ ಪರಂಪರೆಗೆ ಹೊಸ ಸ್ಪರ್ಶ

ಗದಗ ಜಿಲ್ಲೆಯ ಇತಿಹಾಸ ಪ್ರಸಿದ್ಧ ಲಕ್ಕುಂಡಿಯ ಗತವೈಭವವನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಮತ್ತೊಂದು ಮಹತ್ವದ ಹೆಜ್ಜೆ ಇಡಲಾಗುತ್ತಿದೆ. ಈ ಬಾರಿ ಒಟ್ಟು 6 ಸ್ಮಾರಕಗಳ ಸಂರಕ್ಷಣೆ, ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡುವ ಜತೆಗೆ ದಶ ದೇವಾಲಯ, ದಶ ಬಾವಿಗಳ ಅನಾವರಣ ಹಾಗೂ ಪ್ರಾಚ್ಯಾವಶೇಷಗಳ ಅನ್ವೇಷಣೆ ಸಪ್ತಾಹಕ್ಕೂ ಚಾಲನೆ ದೊರೆಯಲಿದೆ.


## 10.16 ಕೋಟಿ ರೂ. ವೆಚ್ಚದ ಕಾಮಗಾರಿಗೆ ಇಂದು ವಿಧ್ಯುಕ್ತ ಚಾಲನೆ

GOVERNMENT OF KARNATAKA ಕರ್ನಾಟಕ ಒಂದು ರಾಜ್ಯ. ಹಲವು ಜಗತ್ತುಗಳು.

ಮೇ 2ರಂದು ಬೆಳಗ್ಗೆ 10.30ಕ್ಕೆ ಲಕ್ಕುಂಡಿ ಗ್ರಾಮದ ಹಾಲಗುಂಡಿ ಬಸವೇಶ್ವರ ದೇವಸ್ಥಾನ ಆವರಣದಲ್ಲಿ ಈ ಐತಿಹಾಸಿಕ ಕಾರ್ಯಕ್ರಮ ನಡೆಯಲಿದೆ. ಗದಗ ಜಿಲ್ಲಾ ಡಳಿತ, ಜಿಪಂ, ಪ್ರವಾಸೋದ್ಯಮ ಇಲಾಖೆ, ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಮೈಸೂರು ಹಾಗೂ ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಸಹಯೋಗದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಒಟ್ಟು 10.16 ಕೋಟಿ ರೂ. ವೆಚ್ಚದ ಕಾಮಗಾರಿ ಕೈಗೊಳ್ಳುವ ಮೂಲಕ ಲಕ್ಕುಂಡಿ ಗತವೈಭವ ಮರುಸೃಷ್ಟಿಗೆ ಮತ್ತೊಂದು ಹೆಜ್ಜೆ ಇಡಲಾಗುತ್ತಿದೆ.

ಈ ಕಾರ್ಯಕ್ರಮ ಸಭಾಪತಿ ಬಸವರಾಜ ಹೊರಟ್ಟಿ ಘನ ಉಪಸ್ಥಿತಿಯಲ್ಲಿ ನಡೆಯಲಿದೆ. ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಮತ್ತು ಗದಗ ಜಿಲ್ಲಾ ಉಸ್ತುವಾರಿ ಸಚಿವ ಎಚ್. ಕೆ. ಪಾಟೀಲ ಅವರು ಶಿಲಾನ್ಯಾಸ ನೆರವೇರಿಸಲಿದ್ದಾರೆ. ನರಗುಂದ ಶಾಸಕ ಸಿ. ಸಿ. ಪಾಟೀಲ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸರಕಾರದ ಮುಖ್ಯ ಸಚೇತಕ ಸಲೀಂ ಅಹ್ಮದ್, ರೋಣ ಶಾಸಕ ಹಾಗೂ ಖನಿಜ ಅಭಿವೃದ್ಧಿ ನಿಗಮದ ಅಧ್ಯಕ್ಷ ಜಿ.ಎಸ್. ಪಾಟೀಲ, ಸಂಸದರಾದ ಬಸವರಾಜ ಬೊಮ್ಮಾಯಿ, ಪಿ.ಸಿ. ಗದ್ದಿಗೌಡರ, ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಡಿ.ಆರ್ . ಪಾಟೀಲ, ಶಿರಹಟ್ಟಿ ಶಾಸಕ ಡಾ. ಚಂದ್ರು ಲಮಾಣಿ, ವಿಧಾನ ಪರಿಷತ್ ಸದಸ್ಯರಾದ ಎಸ್.ವಿ. ಸಂಕನೂರ, ಪ್ರದೀಪ ಶೆಟ್ಟರ್, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಬಿ.ಬಿ. ಅಸೂಟಿ, ತಾಲೂಕು ಅಧ್ಯಕ್ಷ ಅಶೋಕ ಮಂದಾಲಿ ಉಪಸ್ಥಿತರಿರುವರು.


ಲಕ್ಕುಂಡಿ ಗ್ರಾಮದಲ್ಲಿ ಸಿಎಂ ಸಿದ್ದರಾಮಯ್ಯ ಉತ್ಖನನಕ್ಕೆ ಚಾಲನೆ ನೀಡಿದರು.


ಐತಿಹಾಸಿಕ ಲಕ್ಕುಂಡಿ 101 ದೇವಸ್ಥಾನ, 101 ಬಾವಿಗಳನ್ನು ಹೊಂದಿರುವ ಶಿಲ್ಪಕಲೆಗಳ ತೊಟ್ಟಿಲಾಗಿದೆ. ಇತಿಹಾಸದ ಪುಟಗಳಲ್ಲಿ ಹುದುಗಿ ಹೋಗಿರುವ ಲಕ್ಕುಂಡಿಯ ಗತವೈಭವವನ್ನು ಮರುಸೃಷ್ಟಿಸುವ ಜೊತೆಗೆ, ಲಕ್ಕುಂಡಿಯನ್ನು ವಿಶ್ವ ಪಾರಂಪರಿಕ ತಾಣಗಳ ಪಟ್ಟಿಯಲ್ಲಿ ಸೇರ್ಪಡೆಗೆ ಎಲ್ಲ ರೀತಿಯ ಪ್ರಯತ್ನಗಳು ನಡೆದಿವೆ.

**-ಎಚ್.ಕೆ. ಪಾಟೀಲ** ಜಿಲ್ಲಾ ಉಸ್ತುವಾರಿ ಸಚಿವರು


ಲಕ್ಕುಂಡಿಯನ್ನು ಅಂತಾರಾಷ್ಟ್ರೀಯ ಮಟ್ಟದ ಪ್ರವಾಸಿ ತಾಣವನ್ನಾಗಿ ರೂಪಿಸುವ ನಿಟ್ಟಿನಲ್ಲಿ ನಡೆಯುತ್ತಿರುವ ಕೆಲಸಗಳನ್ನು ಸ್ವಾಗತಿಸುವೆ. ಲಕ್ಕುಂಡಿ ಇತಿಹಾಸವನ್ನು ಮುಂದಿನ ತಲೆಮಾರಿಗೆ ಕೊಂಡೊಯ್ಯುವ ಮೂಲಕ ನಮ್ಮ ನೆಲದ ಪರಂಪರೆ ಉಳಿಸಿ ಬೆಳಸಬೇಕಿದೆ.

**-ಸಿ.ಸಿ. ಪಾಟೀಲ,** ಶಾಸಕರು ನರಗುಂದ


ಲಕ್ಕುಂಡಿಯಲ್ಲಿ ಸಿಎಂ ಸಿದ್ದರಾಮಯ್ಯ ಅವರು ಪ್ರಾಚ್ಯಾವಶೇಷಗಳ ಡಿಜಿಟಲೀಕರಣಕ್ಕೆ ಚಾಲನೆ ನೀಡಿದರು.

ಪ್ರವಾಸೋದ್ಯಮ ಇಲಾಖೆ ಕಾರ್ಯದರ್ಶಿ ಡಾ. ಕೆ.ವಿ. ತ್ರಿಲೋಕಚಂದ್ರ, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ. ಎಂ. ವಿ. ವೆಂಕಟೇಶ್, ಪ್ರವಾಸೋದ್ಯಮ ಇಲಾಖೆ ಆಯುಕ್ತ ಅಕ್ರಂ ಪಾಷಾ, ಮತ್ತು ಬೆಳಗಾವಿ ವಿಭಾಗದ ಪ್ರಾದೇಶಿಕ ಆಯುಕ್ತೆ ಜಾನಕಿ ಕೆ. ಎಂ., ಲಕ್ಕುಂಡಿ ಅಭಿವೃದ್ಧಿ ಪ್ರಾಧಿಕಾರದ ರಾಜ್ಯ ಸಮಿತಿ ಸದಸ್ಯ ಸಿ. ಬಿ. ಬೆಟಸೂರಮಠ, ಸಿದ್ಧಲಿಂಗೇಶ್ವರ ಪಾಟೀಲ, ಗೀತಾಂಜಲಿ ರಾವ್, ಅ.ದ. ಕಟ್ಟಿಮನಿ ಹಾಗೂ ಗ್ರಾಮದ ಪ್ರಮುಖರು ಭಾಗವಹಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರೋಹನ ಜಗದೀಶ, ಪುರಾತತ್ವ ಇಲಾಖೆ ಆಯುಕ್ತ ದೇವರಾಜು ಎ., ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ಡಾ. ಶರಣು ಗೋಗೇರಿ, ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕ ಕೊಟ್ರೇಶ್ವರ ವಿಭೂತಿ ಕೋರಿದ್ದಾರೆ.

### ಅಭಿವೃದ್ಧಿಗೊಳ್ಳಲಿರುವ ಸ್ಮಾರಕಗಳು

- ಹಾಲಗುಂಡಿ ಬಸವೇಶ್ವರ ದೇವಾಲಯ- 1.58 ಕೋಟಿ.
- ಕನ್ನೇರ ಭಾವಿ (ಭಾಗ-2)- 1.70 ಕೋಟಿ.
- ಮಲ್ಲಿಕಾರ್ಜುನ ದೇವಾಲಯ, ಗದ್ದುಗೆ- 1.67 ಕೋಟಿ.
- ವಿರೂಪಾಕ್ಷೇಶ್ವರ ದೇವಾಲಯ- 1.81 ಕೋಟಿ.
- ಚಂದ್ರಮೌಳೀಶ್ವರ ದೇವಾಲಯ- 1.86 ಕೋಟಿ
- ಕಲ್ಮಠ ದ್ವಾರಬಾಗಿಲು ಹಾಗೂ ಬಾವಿ- 1.54 ಕೋಟಿ.

### ಉತ್ಖನನಕ್ಕೆ ಸಿಎಂ ಚಾಲನೆ


2025 ಜೂನ್ 3ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಲಕ್ಕುಂಡಿ ಭೇಟಿ ನೀಡಿ, ಬಯಲು ವಸ್ತು ಸಂಗ್ರಹಾಲಯ ವೀಕ್ಷಣೆ ಮಾಡಿದರು. ಅಲ್ಲದೇ ಕೋಟೆ ವೀರಭದ್ರೇಶ್ವರ ದೇವಸ್ಥಾನದ ಆವರಣದಲ್ಲಿ ಉತ್ಖನನಕ್ಕೆ ಚಾಲನೆ ನೀಡಿ, ಐತಿಹಾಸಿಕ ತಾಣಗಳ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

### ಲಕ್ಕುಂಡಿ ಅಭಿವೃದ್ಧಿಯ ಘಟ್ಟಗಳು

- 2024 ನವೆಂಬರ್ 22ರಿಂದ ಮೂರು ದಿನಗಳ ಕಾಲ ಪ್ರಾಚ್ಯಾವಶೇಷಗಳ ಅನ್ವೇಷಣೆ, 1500ಕ್ಕೂ ಹೆಚ್ಚು ಪ್ರಾಚ್ಯಾವಶೇಷಗಳು ಪತ್ತೆ
- 2024-25ನೇ ಸಾಲಿನಲ್ಲಿ ಒಟ್ಟು 5 ಕೋಟಿ ರೂ. ವೆಚ್ಚದಲ್ಲಿ 11 ಸ್ಮಾರಕಗಳ ಸಂರಕ್ಷಣೆ ಹಾಗೂ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲಾಗಿದೆ.
- ದೆಹಲಿಯಲ್ಲಿ ನಡೆದ 2025ರ ಗಣರಾಜ್ಯೋತ್ಸವ ಪರೇಡ್ ನಲ್ಲಿ ಲಕ್ಕುಂಡಿಯ ಸರ್ವ ಜನಾಂಗದ ಶಾಂತಿಯ ತೋಟ ಟ್ಯಾಬ್ಲೋ ಪ್ರದರ್ಶನ
- ಕೋಟೆ ವೀರಭದ್ರೇಶ್ವರ ದೇವಸ್ಥಾನದ ಆವರಣದಲ್ಲಿ 10 ಲಕ್ಷ ರೂ. ವೆಚ್ಚದಲ್ಲಿ ನಡೆದ ಉತ್ಖನನದಲ್ಲಿ 50ಕ್ಕೂ ಹೆಚ್ಚು ಪ್ರಾಚ್ಯಾವಶೇಷಗಳ ಸಂರಕ್ಷಣೆ
- ಲಕ್ಕುಂಡಿ ಸಮಗ್ರ ಅಭಿವೃದ್ಧಿಗೆ 1.80 ಕೋಟಿ ರೂ. ವೆಚ್ಚದಲ್ಲಿ ಸಮಗ್ರ ಡಿಪಿಆರ್ ತಯಾರಿಕೆಗೆ ಒಡಂಬಡಿಕೆ
- ಲಕ್ಕುಂಡಿಗೆ ಪ್ರವಾಸಿಗರನ್ನು ಆಕರ್ಷಿಸಲು 50 ಲಕ್ಷ ರೂ. ವೆಚ್ಚದಲ್ಲಿ ಪುಸ್ತಕ ಪ್ರಕಟಣೆ ಮತ್ತು ಸಾಕ್ಷ್ಯ ಚಿತ್ರ ನಿರ್ಮಾಣ
- 95 ಲಕ್ಷ ರೂ. ವೆಚ್ಚದಲ್ಲಿ ಪಂಚಬಾವಿ ಮತ್ತು ಪಂಚ ದೇವಾಲಯಗಳ ಅನಾವರಗೊಳಿಸಲಾಗಿದೆ
- ಲಕ್ಕುಂಡಿಯಲ್ಲಿ ಪತ್ತೆಯಾದ ನಿಧಿ ಮರಳಿಸಿದ ರಿತ್ತಿ ಕುಟುಂಬಕ್ಕೆ ನಿವೇಶನ, 5 ಲಕ್ಷ ರೂ. ಪ್ರೋತ್ಸಾಹ ಹಾಗೂ ಉದ್ಯೋಗ.
- ಲಕ್ಕುಂಡಿಯ 16 ಸ್ಮಾರಕಗಳನ್ನು ರಾಜ್ಯ ಸಂರಕ್ಷಿತ ತಾಣಗಳಾಗಿ ಘೋಷಣೆ
- ಐತಿಹಾಸಿಕ ಲಕ್ಕುಂಡಿಯನ್ನು ಯುನೆಸ್ಕೋ ಪಾರಂಪರಿಕ ತಾಣಗಳ ಪಟ್ಟಿಯಲ್ಲಿ ಸೇರ್ಪಡೆಗೆ ಕ್ರಮ

## ದಶ ದೇವಾಲಯಗಳ ಅನಾವರಣ

### ನರಗುಂದವರ ಬಾವಿ ಹತ್ತಿರ ಈಶ್ವರ ದೇವಸ್ಥಾನ


ನರಗುಂದವರ ಬಾವಿ ಹತ್ತಿರ ಈಶ್ವರ ದೇವಸ್ಥಾನ ಇದ್ದು ಇದು ಪ್ರಾಚೀನ ಸ್ಮಾರಕವಾಗಿದ್ದು, ಗೋಡೆಗಳಲ್ಲಿ ಪ್ರಾಚ್ಯಾವಶೇಷಗಳು ಕಂಡುಬರುತ್ತದೆ, ಕಾಲಾಂತರದಲ್ಲಿ ಈ ದೇವಸ್ಥಾನವನ್ನು ರೂಪಾಂತರಗೊಳಿಸಲಾಗಿದೆ.

### ಬ್ಯಾಳಿ ಬಸವಣ್ಣ ದೇವಾಲಯ


ಕಲ್ಯಾಣ ಚಾಲುಕ್ಯರ ಕಾಲದ ಬ್ಯಾಳಿ ಬಸವಣ್ಣ ದೇವಾಲಯ ಎಂದು ಕರೆಯುತ್ತಾರೆ. ಈ ಪ್ರಾಚೀನ ಸ್ಮಾರಕದಲ್ಲಿ ಬಸವಣ್ಣನ ನಂದಿಶಿಲ್ಪ ಹಾಗೂ ಕಲಾತ್ಮಕ ಕಂಬಗಳಿವೆ.

### ರಾಮಲಿಂಗೇಶ್ವರ ದೇವಾಲಯ


ರಾಮಲಿಂಗೇಶ್ವರ ದೇವಾಲಯ ಕಲ್ಯಾಣ ಚಾಲುಕ್ಯರ ಕಾಲದ ದೇವಾಲಯ. ಗರ್ಭಗೃಹ, ಈಶ್ವರಲಿಂಗು, ಒಂದೇ ಗರ್ಭಗೃಹ ಎದುರಿಗೆ ಸಭಾಮಂಟಪ ವಿಸ್ತಾರವಾಗಿದೆ. ಶಾಸನೋಕ್ತವಾಗಿ ರಾಮಲಿಂಗೇಶ್ವರ ದೇವಾಲಯ ಪ್ರಾಚೀನ ದೇವಾಲಯವಾಗಿದೆ.

### ಕೋಟೆ ಕೊತ್ತಲಮ್ಮ ದೇವಿಯ ದೇವಾಲಯ


ಕೋಟೆ ಕೊತ್ತಲಮ್ಮ ದೇವಾಲಯ ಕೋಟೆಗೆ ಹೊಂದಿಕೊಂಡಿರುವ ಪ್ರಾಚೀನ ಸ್ಮಾರಕ ದೇವಾಲಯವಾಗಿದೆ. ಒಂದೇ ಗರ್ಭಗೃಹ ಹೊಂದಿದ್ದು, ದೇವಾಲಯದ ಗರ್ಭಗೃಹದಲ್ಲಿ ಕೊತ್ತಲಮ್ಮ ದೇವಿಯ ಶಿಲ್ಪವಿದೆ. ಇದರ ಎದುರಿಗೆ ವಿಸ್ತಾರವಾದ ಸಭಾಮಂಟಪವಿದೆ.

### ಕಲ್ಮೇಶ್ವರ ದೇವಾಲಯ


ಕಲ್ಯಾಣ ಚಾಲುಕ್ಯರ ಕಾಲದ ಈ ಪ್ರಾಚೀನ ಸ್ಮಾರಕ ದೇವಾಲಯ ಒಂದೇ ಗರ್ಭಗೃಹದಲ್ಲಿ ಈಶ್ವರಲಿಂಗು ಇದೆ. ಈ ಸ್ಮಾರಕವು ಶಾಸನೋಕ್ತವಾಗಿದ್ದು ಗರ್ಭಗೃಹಕ್ಕೆ ಹೊಂದಿ ಸಭಾಮಂಟಪವಿದೆ.


### ಕಟಗಿ ಓಣಿ ಈಶ್ವರ ದೇವಾಲಯ


ಕಟಗಿಯವರ ಓಣಿಯ ಈಶ್ವರ ದೇವಾಲಯವು ಪ್ರಾಚೀನ ಸ್ಮಾರಕವಾಗಿದ್ದು, ಒಂದೇ ಗರ್ಭಗೃಹವನ್ನು ಹೊಂದಿದೆ. ಗರ್ಭಗೃಹದಲ್ಲಿ ಈಶ್ವರ ಲಿಂಗ ಇದೆ. ಇದರ ಹಿಂದೆ ಶಾಸನಗಳಿವೆ. ಪೀಠಭಾಗದಲ್ಲಿ ಗರುಡ ಲಾಂಛನದ ಉಬ್ಬು ಶಿಲ್ಪವೂ ಇದೆ.

### ಹಾಲಗುಂಡಿ ಈಶ್ವರ ಮಂಟಪ


ಹಾಲಗುಂಡಿ ಈಶ್ವರ ಮಂಟಪ ಹಾಲಗುಂಡಿ ಕೆರೆಯ ಹತ್ತಿರ, ಪ್ರಾಚೀನ ಸ್ಮಾರಕ ಕಲಾತ್ಮಕ ಕೆತ್ತನೆ ಕಂಬಗಳು ಈಶ್ವರಲಿಂಗು ಮಂಟಪ ಇದೆ.

### ಲೆಕ್ಕದ ವೀರಣ್ಣ ದೇವಾಲಯ


ಈ ಪ್ರಾಚೀನ ಸ್ಮಾರಕ ಒಂದೇ ಗರ್ಭಗೃಹವನ್ನು ಹೊಂದಿದೆ. ಗರ್ಭಗೃಹದಲ್ಲಿ ವೀರಭದ್ರ ಶಿಲ್ಪದ ಕೆಳಭಾಗದಲ್ಲಿ ಶಾಸನ ಇದೆ. ದೇವಾಲಯದ ಎದುರುಭಾಗದಲ್ಲಿ ಕಲಾತ್ಮಕವಾಗಿ ಕೆತ್ತಲಾದ ಕಂಬಗಳು ಇವೆ.

### ಮಾಳಿ ಬಾವಿ ಹತ್ತಿರದ ಈಶ್ವರ ದೇವಾಲಯ


ಇದು ಪ್ರಾಚೀನ ಸ್ಮಾರಕವಾಗಿದ್ದು, ಕಲ್ಯಾಣ ಚಾಲುಕ್ಯರ ಕಾಲಕ್ಕೆ ಸೇರಿದೆ. ಈ ದೇವಾಲಯದಲ್ಲಿ ಒಂದೇ ಗರ್ಭಗೃಹವಿದ್ದು, ಅದರಲ್ಲಿ ಈಶ್ವರಲಿಂಗು ಇದೆ. ಗರ್ಭಗೃಹಕ್ಕೆ ಹೊಂದಿಕೊಂಡಂತೆ ಅಂತರಾಳ ನಿರ್ಮಾಣಗೊಂಡಿದೆ.

### ಕನ್ನರ ಬಾವಿ ಮಾರುತಿ ದೇವಾಲಯ


ಪ್ರಾಚೀನ ಸ್ಮಾರಕ ಬಾವಿ, ಮಾರುತಿ ದೇವಾಲಯವು ಪೂರ್ವಾಭಿಮುಖ ರಾಷ್ಟ್ರಕೂಟರ ಕಾಲದಲ್ಲಿ ನಿರ್ಮಿಸಿದ ಬಾವಿ. ಗರ್ಭಗೃಹದಲ್ಲಿ ರಾಮ, ಲಕ್ಷಣ, ಸೀತಾ ಶಿಲ್ಪವಿದೆ, ಬಾವಿಗೆ ಹೊಂದಿಕೊಂಡು ಈಶ್ವರ ದೇವಾಲಯವು ಇದೆ.

## ದಶ ಬಾವಿಗಳ ಅನಾವರಣ

### ಕುನ್ನಿ ಬಾವಿ


ಕಲ್ಯಾಣ ಚಾಲುಕ್ಯರ ಕಾಲದ ಪ್ರಾಚೀನ ಸ್ಮಾರಕ ಕೋಟೆಗೋಡೆಗೆ ಹೊಂದಿರುವ ಕುನ್ನಿ ಭಾವಿ ಪ್ರಾಚೀನ ಬಾವಿಯಾಗಿದ್ದು, ವೃತ್ತಾಕಾರದ ಮೆಟ್ಟಿಲುಗಳು ಕಪ್ಪಲಿ ಕೋಟೆಯ ಒಳಭಾಗದಲ್ಲಿದೆ. ಈ ಪ್ರಾಚೀನ ಸ್ಮಾರಕ ನನ್ನೆಶ್ವರ ದೇವಾಲಯದ ಹತ್ತಿರದಲ್ಲಿದೆ.

### ಕುಂಬಾರ ಬಾವಿ-1


ಕಲ್ಯಾಣ ಚಾಲುಕ್ಯರ ಕಾಲಕ್ಕೆ ಸೇರಿದ ಪ್ರಾಚೀನ ಬಾವಿಯಾಗಿದ್ದು, ಈ ಬಾವಿಯಲ್ಲಿ ಕನ್ನಡ ಶಾಸನವಿದೆ. ಇದು ಹೊಕ್ಕು ತುಂಬುವ ಬಾವಿಯಾಗಿದ್ದು, ಮೆಟ್ಟಿಲುಗಳೊಂದಿಗೆ ನಿರ್ಮಿಸಲಾದ ಕಪ್ಪಲಿ ಬಾವಿಯಾಗಿದೆ.ಈ ಬಾವಿ ಕೊಪ್ಪಳ ರಸ್ತೆಗೆ ಹೊಂದಿಕೊಂಡಿದೆ.

### ಹನುಮನ ಬಾವಿ


ಹನುಮನ ಬಾವಿಯು ಕಲ್ಯಾಣ ಚಾಲುಕ್ಯರ ಕಾಲಕ್ಕೆ ಸೇರಿದ ಪ್ರಾಚೀನ ಸ್ಮಾರಕ ಬಾವಿಯಾಗಿದ್ದು, ಇದು ಹೊಕ್ಕು ತುಂಬುವ ಬಾವಿಯಾಗಿದೆ. ಈ ಬಾವಿ ಹನುಮನ ಗುಡಿಯ ಹತ್ತಿರದಲ್ಲಿದೆ ಮತ್ತು ಸ್ಥಳೀಯವಾಗಿ 'ಹನುಮನ ಬಾವಿ' ಎಂದೇ ಪ್ರಸಿದ್ಧವಾಗಿದೆ.

### ಕುಂಬಾರ ಬಾವಿ-2


ಕಲ್ಯಾಣ ಚಾಲುಕ್ಯರ ಕಾಲಕ್ಕೆ ಸೇರಿದ ಪ್ರಾಚೀನ ಬಾವಿಯಾಗಿದೆ. ಈ ಬಾವಿಯಲ್ಲಿ ರಾಷ್ಟ್ರಕೂಟರ ಕಾಲದ ವೀರಗಲ್ಲು ಶಾಸನವಿದೆ. ಈ ಬಾವಿ ಐತಿಹಾಸಿಕ ಮಹತ್ವ ಹೊಂದಿರುವ ಹಳೆಯ ಬಾವಿಗಳಲ್ಲೊಂದು ಆಗಿದೆ. ಅತ್ತಿಮಬ್ಬೆ ಮಹಾದ್ವಾರದ ಹತ್ತಿರದಲ್ಲಿಯೇ ಈ ಬಾವಿ ಇದೆ.


### ನರಗುಂದದವರ ಬಾವಿ


ನರಗುಂದರವರ ಬಾವಿಯು ಪ್ರಾಚೀನ ಸ್ಮಾರಕವಾಗಿದ್ದು, ಇದು ಹೊಕ್ಕು ತುಂಬುವ ಮೆಟ್ಟಿಲುಗಳೊಂದಿಗೆ ನಿರ್ಮಿಸಲಾದ ಕಪ್ಪಲಿ ಬಾವಿಯಾಗಿದೆ. ಈ ಬಾವಿ ಕಲಾತ್ಮಕವಾಗಿ ಕರಿ ಕಲ್ಲಿನಿಂದ ನಿರ್ಮಿತವಾಗಿದ್ದು ಅದರ ಗೋಡೆಗಳಲ್ಲಿ ಪ್ರಾಚ್ಯಾವಶೇಷಗಳು ಕಂಡುಬರುತ್ತವೆ.

### ಕಣವಿಯವರ ಬಾವಿ


ಕಣವಿಯವರ ಬಾವಿ ಲಕ್ಕುಂಡಿಯಲ್ಲಿ ಇರುವ ಪ್ರಾಚೀನ ಸ್ಮಾರಕಗಳಲ್ಲಿ ಒಂದಾಗಿದ್ದು, ಕಲ್ಯಾಣ ಚಾಲುಕ್ಯರ ಕಾಲದ ಶಿಲ್ಪಕಲೆಯ ಕಲಾತ್ಮಕ ಕೆತ್ತನೆಯ ಇದೆ. ಬಾವಿಯ ಗೋಡೆಗಳಲ್ಲಿ ಅತಿ ಸುಂದರವಾದ ಕೆತ್ತನೆಗಳು ಮತ್ತು ವಾಸ್ತುಶಿಲ್ಪ ಕಾಣಸಿಗುತ್ತವೆ.

### ಪಾಟೀಲರ ಬಾವಿ


ಶಾವಗಿ ಭರಮಪ್ಪ ಹತ್ತಿರದಲ್ಲಿರುವ ಪ್ರಾಚೀನ ಸ್ಮಾರಕ ಬಾವಿಯಾಗಿದ್ದು, ಕೋಟೆಯ ಪ್ರವೇಶ ದ್ವಾರದ ಸಮೀಪದಲ್ಲಿದೆ.ಈ ಬಾವಿ ಐತಿಹಾಸಿಕ ಮಹತ್ವ ಹೊಂದಿರುವ ಹಳೆಯ ಬಾವಿಗಳಲ್ಲೊಂದು ಆಗಿದೆ.


### ಕಮತರ ಬಾವಿ


ಕಮತರ ಬಾವಿಯು ಕಲಾತ್ಮಕ ಕೆತ್ತನೆಯಿಂದ ನಿರ್ಮಿತವಾದ ಕರಿಯ ಕಲ್ಲಿನ ಪ್ರಾಚೀನ ಸ್ಮಾರಕ ಬಾವಿಯಾಗಿದೆ. ಈ ಬಾವಿಯಲ್ಲಿ ಮೂರು ಪ್ರವೇಶ ದ್ವಾರಗಳೊಂದಿಗೆ ಮೆಟ್ಟಿಲುಗಳ ವ್ಯವಸ್ಥೆಯಿದೆ. ಈ ಬಾವಿಯು ಜಂತ್ಲಿ- ಶಿರೂರ ರಸ್ತೆಯ ಎಡ ಭಾಗದಲ್ಲಿದೆ.

### ಕಲ್ಮಠ ಬಾವಿ


ಇದು ಪ್ರಾಚೀನ ಸ್ಮಾರಕ ಬಾವಿಯಾಗಿದ್ದು, ಕಲ್ಮಠಕ್ಕೆ ಹೊಂದಿರುವ ಈ ಪ್ರಾಚೀನ ಸ್ಮಾರಕ ಬಾವಿಯು ಕುಡಿಯುವ ನೀರಿನ ಅರವಟಿಗೆ ರೂಪದಲ್ಲಿದೆ.

### ಅಕ್ಕ ತಂಗಿಯರ ಬಾವಿ


ಅಕ್ಕ-ತಂಗಿಯರ ಬಾವಿ ಕರಿಯ ಕಲ್ಲಿನ ಪ್ರಾಚೀನ ಸ್ಮಾರಕ ಬಾವಿಯಾಗಿದೆ. ಈ ಬಾವಿ ಅಕ್ಕ ತಂಗಿಯರ ಭಾವಿ ಎಂಬ ಪ್ರತೀತಿ ಇದೆ. ಈ ಬಾವಿಯು ಪಾಪನಾಶಿ ರಸ್ತೆಯ ಎಡ ಭಾಗದಲ್ಲಿದೆ.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka